ಸಂಪುಟ 01 | ಸಂಚಿಕೆ 204 | ಶನಿವಾರ 20 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ನಿರಾಶ್ರಿತರ ದಿನ

ಪ್ರತಿ ವರ್ಷ ಜೂನ್ 20 ರಂದು ಪ್ರಪಂಚದಾದ್ಯಂತ ವಿಶ್ವ ನಿರಾಶ್ರಿತರ ದಿನವನ್ನು (World Refugee Day) ಆಚ-ರಿಸಲಾಗುತ್ತದೆ. ಯುದ್ಧ, ಹಿಂಸೆ ಮತ್ತು ಕಿರುಕುಳದಿಂದಾಗಿ ತಮ್ಮ ಸ್ವಂತ ದೇಶಗಳನ್ನು ತೊರೆಯಲು ಬಲವಂತವಾಗಿ, ಸುರಕ್ಷತೆಯ ಹುಡುಕಾಟದಲ್ಲಿರುವ ಲಕ್ಷಾಂತರ ನಿರಾಶ್ರಿತರ ಧೈರ್ಯ ಮತ್ತು ಸ್ಥಿತಿಸ್ಥಾಪಕತ್ವವನ್ನು ಗೌರವಿಸಲು ಇದನ್ನು ಆಚರಿಸಲಾಗುತ್ತದೆ.

## ಸುಭಾಷಿತ

ಒಂದು ಲಿಲ್ಲಿಯಾಗಲಿ ಅಥ-’ವಾ ಗುಲಾಬಿಯಾಗಲಿ ಎಂದಿಗೂ ನಟಿಸುವುದಿಲ್ಲ, ತನ್ನ ಮೂಲಗುಣಕ್ಕೆ ತಕ್ಕಂತೆ ಇರುವುದೇ ಅದರ ಸೌಂದರ್ಯದ ಗುಟ್ಟು.

–ಜಿಡ್ಡು ಕೃಷ್ಣಮೂರ್ತಿ

## ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ
## ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ

❏ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಮಹತ್ವದ ಬೆಳವಣಿಗೆಯಲ್ಲಿ ಕರ್ನಾಟಕದ ಆಡಳಿತ ಯಂತ್ರದಲ್ಲಿ ಮೇಜರ್ ಸರ್ಜರಿ ಮಾಡಲಾಗಿದ್ದು, ಕರ್ನಾಟಕದ ಹಲವು ಐಎಎಸ್ ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ. ಕರ್ನಾಟಕ ಸರ್ಕಾರವು ಐಎಎಸ್ ಅಧಿಕಾರಿಗಳ ವ್ಯಾಪಕ ವರ್ಗಾವಣೆ ನಡೆಸಿದ್ದು,

ಹಲವು ಹಿರಿಯ ಅಧಿಕಾರಿಗಳಿಗೆ ಹೆಚ್ಚುವರಿ ಜವಾಬ್ದಾರಿಗಳನ್ನು ವಹಿಸಲಾಗಿದ್ದು, ಆರ್. ಸೆಲ್ವಮಣಿ (2013ನೇ ಬ್ಯಾಚ್), ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಾಗಿದ್ದು, ಅಕ್ರಮ್ ಪಾಷಾ ಅವರ ವರ್ಗಾವಣೆಯ ಹಿನ್ನೆಲೆಯಲ್ಲಿ ಬೆಂಗಳೂರು ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರ (ಎಂಡಿ) ಹೆಚ್ಚುವರಿ ಹೊಣೆಗಾರಿಕೆಯನ್ನು ವಹಿಸಲಾಗಿದೆ. ಅಂಜುಂ ಪರ್ವೇಜ್ (1994ನೇ ಬ್ಯಾಚ್), ಅರಣ್ಯ, ಪರಿಸರ ಮತ್ತು ಪರಿಸರಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದು, ಅವರಿಗೆ ಸಾರ್ವಜನಿಕ ಕಾಮಗಾ-ರಿಗಳ ಇಲಾಖೆಯ (ಪಿಡಬ್ಲ್ಯುಡಿ) ಹೆಚ್ಚುವರಿ ಜವಾಬ್ದಾರಿಯನ್ನೂ ನೀಡಲಾಗಿದೆ. ಮಾಜಿ ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಅಂಜುಂ ಪರ್ವೇಜ್ ಅವರನ್ನು ಅರಣ್ಯ, ಪರಿಸರ ಮತ್ತು ಪರಿಸರಶಾಸ್ತ್ರ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ರಾಜೇಂದ್ರ ಕುಮಾರ್ ಕಟಾರಿಯಾ (1996ನೇ ಬ್ಯಾಚ್), ಕಂದಾಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದು, ಅವರಿಗೆ ಗೃಹ ಇಲಾಖೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ಖುಷ್ಬೂ ಚೌಧರಿ (2008ನೇ ಬ್ಯಾಚ್), ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕರಾಗಿದ್ದು, ಅವರಿಗೆ ಇನ್ವೆಸ್ಟ್ ಕರ್ನಾಟಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ), ಎನ್‌ಜಿಇಎಫ್ ಅಧ್ಯಕ್ಷೆ ಮತ್ತು ವ್ಯವಸ್ಥಾಪಕ ನಿರ್ದೇಶಕಿ (ಸಿಎಂಡಿ) ಹಾಗೂ ಮೈಸೂರು ಲ್ಯಾಂಪ್ ವರ್ಕ್?ಸಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ (ಎಂಡಿ) ಹುದ್ದೆಗಳ ಹೆಚ್ಚುವರಿ ಜವಾಬ್ದಾರಿಯನ್ನು ನೀಡಲಾಗಿದೆ.

ಮುನೀಶ್ ಮೌದ್ಗಿಲ್, ಬೃಹತ್ ಬೆಂಗಳೂರು ಪ್ರಾಧಿಕಾರದ ವಿಶೇಷ ಆಯುಕ್ತರಾಗಿದ್ದು, ಅವರಿಗೆ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ (ಕಾರ್ಯಕ್ರಮ ಮತ್ತು ಯೋಜನಾ ಅನುಷ್ಠಾನ) ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ದೀಪಾ ಚೋಳನ್ ಅವರನ್ನು ಸಾರಿಗೆ ಇಲಾಖೆಗೆ ವರ್ಗಾಯಿಸಲಾಗಿದ್ದು, ಕಾವೇರಿ ಬಿ.ಬಿ. ಅವ-ರಿಗೆ ನಗರಾಭಿವೃದ್ಧಿ ಇಲಾಖೆ (ಯುಡಿ ಮತ್ತು ನಗರಸಭೆಗಳು) ಹೊಣೆಗಾರಿಕೆ ನೀಡಲಾಗಿದೆ. ವೆಂಕಟೇಶ್ ಎಂ.ವಿ. ಅವರನ್ನು ಸಹಕಾರ ಸಂಘಗಳ ನಿಬಂಧಕರಾಗಿ ನೇಮಿಸಲಾಗಿದ್ದು, ಆರ್. ಸೆಲ್ವಮಣಿ ಅವರನ್ನು ಸಾರಿಗೆ ಮತ್ತು ರಸ್ತೆ ಸುರಕ್ಷತಾ ಆಯುಕ್ತರಾಗಿ ನಿಯೋಜಿಸಲಾಗಿದೆ.

## ರಾಯಚೂರು ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಇಂದು ಮಾಹಿತಿ ಹಕ್ಕು ಕಾರ್ಯಾಗಾರ

❏ ನೈಜ್ಯ ದೆಸೆ ನ್ಯೂಸ್

ರಾಯಚೂರು ಜೂನ್ 18 (ಕರ್ನಾಟಕ ವಾರ್ತೆ): ಮಾಹಿತಿ ಹಕ್ಕು ಕಾಯ್ದೆ-2005ರ ಪರಿಣಾಮಕಾರಿ ಅನುಷ್ಠಾನ, ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕರ್ತವ್ಯಗಳು ಹಾಗೂ ಮಾಹಿತಿ ಹಕ್ಕು ಸಂಬಂಧಿಸಿದ ವಿಷಯಗಳ ಕುರಿತು ಕಾರ್ಯಾಗಾರ ಮತ್ತು ಸಂವಾದ ಕಾರ್ಯಕ್ರಮದಲ್ಲಿ ರಾಯಚೂರು ನಗರದ ಕೃಷಿ ವಿಶ್ವವಿದ್ಯಾಲಯದ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ಜೂನ್ 20ರ ಬೆಳಿಗ್ಗೆ 10ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಜರಾಗುವಂತೆ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್ ಅವರು ಕೋರಿದ್ದಾರೆ.



ಕರ್ನಾಟಕ ಮಾಹಿತಿ ಆಯೋಗದ ಕಲಬುರಗಿ ಪೀಠದ ರಾಜ್ಯ ಮಾಹಿತಿ ಆಯುಕ್ತರಾದ ಬಿ. ವೆಂಕಟ ಸಿಂಗ್ ಹಾಗೂ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತರುಗಳಾದ ರಾಮನ್ ಕೆ. ಮತ್ತು ಡಾ.ರಿಚರ್ಡ್ ವಿನ್ಸೆಂಟ್ ಡೊಸೋಜ ಅವರು ಜೂನ್.20ರ ಶನಿವಾರ ದಂದು ರಾಯಚೂರು ಜಿಲ್ಲೆಗೆ ಆಗಮಿಸಿ, ಮಾಹಿತಿ ಹಕ್ಕು ಕಾಯ್ದೆ-2005ರ ಪರಿಣಾಮಕಾರಿ ಅನುಷ್ಠಾನ, ಸಾರ್ವಜನಿಕ ಮಾಹಿತಿ ಅಧಿಕಾ-ರಿಗಳ ಕರ್ತವ್ಯಗಳು ಹಾಗೂ ಮಾಹಿತಿ ಹಕ್ಕು ಸಂಬಂಧಿತ ವಿಷಯಗಳ ಕುರಿತು ಕಾರ್ಯಾಗಾರ ಮತ್ತು ಸಂವಾದ ಕಾರ್ಯಕ್ರಮ ನಡೆಸಲಿದ್ದಾರೆ. ಈ ಕಾರ್ಯಾಗಾರದಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾ-ರಿಗಳು, ಪೊಲೀಸ್ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ), ಗ್ರಾಮ ಪಂಚಾಯತ್ ಕಾರ್ಯದರ್ಶಿಗಳು ಹಾಗೂ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾ-ರಿಗಳು ಕಡ್ಡಾಯವಾಗಿ ನಿಗದಿತ ಸಮಯಕ್ಕೆ ಕಾರ್ಯಾಗಾರದಲ್ಲಿ ಭಾಗವಹಿಸುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಸತ್ಯ ನಾರಾಯಣ ಶೆಟ್ಟಿ
## ರಾಯಚೂರಿನ ವಿವಿಧ ಕಡೆ ಭೇಟಿ ಪರಿಶೀಲನೆ

❏ ನೈಜ್ಯ ದೆಸೆ ನ್ಯೂಸ್



ರಾಯಚೂರು ಜೂನ್ 19 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಸತ್ಯ ನಾರಾಯಣ ಶೆಟ್ಟಿ ಅವರು ಜೂನ್ 18ರ ಗುರುವಾರ ದಂದು ರಾಯಚೂರಿ ರಿಮ್ಸ್ ಆಸ್ಪತ್ರೆ, ಸಖಿ ಒನ್ ಸ್ಟಾಫ್ ಸೆಂಟರ್, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಪಶೀಲನೆ ಮಾಡಿದರು. ಮೊದಲು ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಅಪೌಷ್ಟಿಕ ಮಕ್ಕಳ ಆರೋಗ್ಯ ವಿಚಾರಿಸಿ ಪಾಲಕರೊಂದಿಗೆ ಸಮಾಲೋಚಿಸಿದರು.

ನಂತರ ರಿಮ್ಸ್ ಆಸ್ಪತ್ರೆಯ ಆವರಣದಲ್ಲಿರುವ ಸಖಿ ಓನ್ ಸ್ಟಾಫ್ ಸೆಂಟ-ರ್‌ಗೆ ಭೇಟಿ ನೀಡಿ, ಮಕ್ಕಳ ಪ್ರಕರಣಗಳ ಕುರಿತು ಸಿಬ್ಬಂದಿಗಳ ಕಾರ್ಯನಿರ್ವಹಣೆ ಮತ್ತು ಇತರೆ ಇಲಾಖೆಗಳ ಸಮನ್ವಯದೊಂದಿಗೆ ಕ್ರಮಕೈಗೊಳ್ಳಲು ಸಲಹೆನೀಡಿದರು. ನಂತರ ರಾಯಚೂರಿನ ಆಗಾಫೆ ಚರ್ಚ್ ಹತ್ತಿರವಿರುವ ಮಕ್ಕಳ ಪಾಲನಾ ಸರ್ಕಾರಿ ಸಂಸ್ಥೆಗಳಿಗೆ ಭೇಟಿ ಮಾಡಿ ಮಕ್ಕಳೊಂದಿಗೆ ಸಮಾಲೋಚಿಸಿ, ಅಧಿಕಾರಿ ಮತ್ತು ಸಿಬ್ಬಂದಿಯೊಂದಿಗೆ ಸಭೆ ನಡೆಸಿದರು. ಇದೇ ಸಂಧರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಂ.ಡಿ.ಗೋಕುಲ್, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಸುದರ್ಶನ, ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮನ್ಸೂರ್ ಅಹ್ಮದ್ ಸೇ-ರಿದಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಕಲ್ಯಾಣ ಸಮಿತಿಯ ಅಧೀಕ್ಷಕರು, ಅಧಿಕಾರಿ, ಸಿಬ್ಬಂದಿಗಳು ಇದ್ದರು.

## ಹಾಲಾಪೂರ ಗ್ರಾಪಂಗೆ ಜಿಲ್ಲಾ ಪಂಚಾಯತ ಸಿಇಓ ಈಶ್ವರ ಕುಮಾರ ಕಾಂದು ಬೇಟಿ

❏ ನೈಜ್ಯ ದೆಸೆ ನ್ಯೂಸ್



ಮಸ್ಕಿ: ತಾಲ್ಲೂಕು ಹಾಲಾಪೂರ ಗ್ರಾಮ ಪಂಚಾಯತಿಗೆ ದಿಡರನೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅದಿಕಾರಿ ಈಶ್ವರಕುಮಾರ ಕಾಂದೂ ಬೇಟಿ ನೀಡಿ ನಂತರ ಪಾಟೀಲ್ ನ್ಯೂಜ್ ಜೊತೆ ಮಾತನಾಡುತ್ತಾ ಇಂದು ಹಾಲಾಪೂರ ಗ್ರಾಮ ಪಂಚಾಯತಿಗೆ ಬೇಟಿ ನೀಡಿದ ಕಾರಣ ಇಲ್ಲಿಯ ಸಿಬ್ಬಂದಿ ಕುಡಿಯುವ ನೀರು,ಆರೋಗ್ಯ,ಮತ್ತಿತರ ಸಮಸ್ಯೆಗಳ ಕುರಿತು ವಿವರ ಪಡೆದುಕೊಂಡಿದ್ದೆನೆ ಹಾಗೆ ಗ್ರಾಮಸ್ಥರ ಬಹುದಿನದ ಬೇಡಿಕೆ, ಒತ್ತಾಯವೆಂದರೆ

ಹಾಲಾಪೂರ ಗ್ರಾಮ ಪಂಚಾಯತಿ ದೊಡ್ಡ ಪಂಚಾಯತಿಯಾಗಿದ್ದು ಅದನ್ನು ಡಿವೈಡೆಷನ್ ಮಾಡಲು ಗ್ರಾಮಸ್ಥರ ಮನವಿ ಪತ್ರ ಕೊಟ್ಟಿದ್ದು, ಅದನ್ನು ಡಿವೈಡೆಷನ್ ಮಾಡಲು ಸೂಕ್ತ ಕ್ರಮಕ್ಕಾಗಿ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದ್ದು ಅದಕ್ಕೆ ಕಾಲಾವಧಿ ಬೇಕು,ನಮ್ಮ ಜಿಲಾ ಪಂಚಾಯತಿಯಿಂದ ಕೂಡ ಶಿಫಾರಸು ಮಾಡಿದ್ದೆವೆ ಎಂದು ಹೇಳಿದರು. ಹಾಗೆ ಪಂಚಾಯತಿ ಅವಧಿಯಲ್ಲಿ ಸಿಬ್ಬಂದಿ ಸರಿಯಾಗಿ ಕರ್ತವ್ಯ ಮಾಡಬೇಕು, ಕರ್ತವ್ಯದ ಅವಧಿಯಲ್ಲಿ ಅನ್ಯ ವ್ಯಕ್ತಿಗಳು ಪಂಚಾಯತಿಗೆ ಬಂದು ಕುಡಿದು ಆವಚ್ಯ ಪದ ಬಳಕೆ, ಕೆಟ್ಟವರ್ತನೆ ಮಾಡಿದರೆ ಅಂತವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಡಕ್ ಸಂದೇಶ ನೀಡಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ ಪ್ರಭಾರಿ ಇಓ ಶಿವಾನಂದರಡ್ಡಿ,ಸಹಾಯಕ ನಿರ್ದೇಶಕ ಸೊಮನಗೌಡ,ಪಿಡಿಓ ವಿಶ್ವನಾಥ ಹೂಗಾರ,ಗ್ರೆಡ್ ಒನ್ ಕಾರ್ಯದರ್ಶಿ ರಮೇಶ, ಕಾರ್ಯದರ್ಶಿ ಪರಮಣ್ಣ ಹಾಗೂ ಇನ್ನಿತರ ಅಧಿಕಾರಿಗಳು, ಗ್ರಾಮಸ್ಥರು ಇದ್ದರು.

## ಯೋಗ ಜಾಗೃತಿ ಜಾಥಾಕ್ಕೆ ಅಪರ ಜಿಲ್ಲಾಧಿಕಾರಿಗಳಿಂದ ಚಾಲನೆ

❏ ನೈಜ್ಯ ದೆಸೆ ನ್ಯೂಸ್




ರಾಯಚೂರು ಜೂನ್ 19 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಜೂನ್ 21 ರಂದು ನಡೆಯುವ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಗುರುವಾರ ದಂದು ಯೋಗ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಪ್ರಭಾರ ಅಪರ ಜಿಲ್ಲಾಧಿಕಾರಿಗಳಾದ ಹಂಪಣ್ಣ ಸಜ್ಜನ್ ಅವರು ಚಾಲನೆ ನೀಡಿದರು.

ಈ ವೇಳೆ ಅವರು ಮಾತನಾಡಿ, ಆರೋಗ್ಯಕ್ಕಾಗಿ ಯೋಗವನ್ನು ಪ್ರತಿ ದಿನ ಮಾಡುತ್ತಾಹೊದರೆ ಮಾನಸಿಕ ನೆಮ್ಮದಿ ಮತ್ತು ದೈಹಿಕ ಶಕ್ತಿ ಹೆಚ್ಚಿಸುತ್ತದೆ. ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.ಹೀಗಾಗಿ ಜಿಲ್ಲೆಯಲ್ಲಿ ಭಾನುವಾರ ದಂದು ಅಂತರಾಷ್ಟ್ರೀಯ ದಿನಾಚರಣೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಿದರು.

ಯೋಗ ಜಾಗೃತಿ ಜಾಥಾವು ರಾಯಚೂರು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಿಂದ ಸರಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಏಕ್ ಮೀನಾರ್ ವರಿಗೆ ನಡೆಸಲಾಯಿತು.

ಈ ಜಾಥಾದಲ್ಲಿ ಪೂರ್ಣಿಮಾ ಆಯುರ್ವೇದ ಕಾಲೇಜಿನ 200 ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಸುಮಾರು 100 ಜನರು ಭಾಗವಹಿಸಿದ್ದರು ಎಂದು ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಶಂಕರಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಾಲೆಯಿಂದ ವಂಚಿತರಾಗುತ್ತಿರುವ ಲಿಂಗದಹಳ್ಳಿ ಗ್ರಾಮದ ವಿದ್ಯಾರ್ಥಿಗಳು ಬಸ್ ತಡೆದು ಪ್ರತಿಭಟನೆ

❏ ನೈಜ್ಯ ದೆಸೆ ನ್ಯೂಸ್




ದೇವದುರ್ಗ: ಸಾರಿಗೆ ಇಲಾಖೆಯ ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸದ ಪರಿಣಾಮ ವಿದ್ಯಾರ್ಥಿಗಳು ಪ್ರತಿದಿನ ಶಾಲೆಗೆ ತಡವಾಗಿ ಹೋಗುವ ಸ್ಥಿತಿ ಎದು-ರಿಸುತ್ತಿದ್ದು, ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದಲ್ಲಿ ಶುಕ್ರವಾರ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬಸ್ ತಡೆದು ಪ್ರತಿಭಟನೆ ನಡೆಸಿದರು.

ಲಿಂಗದಹಳ್ಳಿಯಿಂದ ಜಾಲಹಳ್ಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಸಮರ್ಪಕ ಬಸ್ ಸೌಲಭ್ಯ ದೊರೆಯದ ಹಿನ್ನೆಲೆಯಲ್ಲಿ ಗ್ರಾಮದ ಶಾಲೆಗಳು ಬೆಳಿಗ್ಗೆ 9 ಗಂಟೆಗೆ ಆರಂಭವಾಗುತ್ತಿದ್ದರೂ, ಕೆಎ-28 ಎಫ್-2022 ಸಂಖ್ಯೆಯ ಬಸ್ ಬೆಳಿಗ್ಗೆ 9.45ಕ್ಕೆ ಗ್ರಾಮಕ್ಕೆ ಆಗಮಿಸಿತು. ಇದರಿಂದ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ತೆರಳುವ ಪರಿಸ್ಥಿತಿ ಉಂಟಾಯಿತು. ಇದರಿಂದ ಬೇಸತ್ತ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಬಸ್ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲೂಕು ಘಟಕದ ಮುಖಂಡ ನಂದಪ್ಪ ಪಿ. ಮಡ್ಡಿ ಮಾತನಾಡಿ, ಸಾರಿಗೆ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯದಿಂದ ಲಿಂಗದಹಳ್ಳಿ ಗ್ರಾಮದ ವಿದ್ಯಾರ್ಥಿಗಳು ನಿರಂತರವಾಗಿ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಆರೋಪಿಸಿದರು. ತಕ್ಷಣವೇ ಬಸ್‌ಗಳು ನಿಗದಿತ ಸಮಯಕ್ಕೆ ಸಂಚ-ರಿಸುವಂತೆ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ದೇವದುರ್ಗ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ವರದಿಗಾರರೊಂದಿಗೆ ಮಾತನಾಡಿದ ದೇವದುರ್ಗ ಸಾರಿಗೆ ಘಟಕದ ಅಧಿಕಾರಿಗಳು , "ಮುಂದಿನ ದಿನಗಳಲ್ಲಿ ಇಂತಹ ತೊಂದರೆ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು" ಎಂದು ತಿಳಿಸಿದರು.

ಪ್ರತಿಭಟನಾಕಾರರು ಬೆಳಿಗ್ಗೆ 9 ಗಂಟೆಗೆ ಲಿಂಗದಹಳ್ಳಿಯಲ್ಲಿ ಬಸ್ ಲಭ್ಯವಾಗಬೇಕು, ಮಧ್ಯಾಹ್ನ 2 ಗಂಟೆಗೆ ಜಾಲಹಳ್ಳಿಯಿಂದ ಲಿಂಗದಹಳ್ಳಿಗೆ ಬಸ್ ಸಂಚರಿಸಬೇಕು ಹಾಗೂ ಸಂಜೆ 5 ಗಂಟೆಗೆ ಜಾಲಹಳ್ಳಿಯಿಂದ ಹೊರಡುವ ಬಸ್ 5.30ಕ್ಕೆ ಲಿಂಗದಹಳ್ಳಿಗೆ ತಲುಪುವಂತೆ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು. ವಿದ್ಯಾರ್ಥಿಗಳ ಶಿಕ್ಷಣದ ಹಿತದೃಷ್ಟಿಯಿಂದ ಸಾರಿಗೆ ಇಲಾಖೆ ತಕ್ಷಣ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿ ಪ್ರತಿಭಟನೆ ಮುಂದುವರಿಸಿದ ವೇಳೆ ದೇವದುರ್ಗ ಸಾರಿಗೆ ಘಟಕದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಇನ್ನು ಮುಂದೆ ಬಸ್‌ಗಳ ಸಮಯ ಪಾಲನೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ನಂತರ ವಿದ್ಯಾರ್ಥಿಗಳು ಹಾಗೂ ಪಾಲಕರು ಪ್ರತಿಭಟನೆಯನ್ನು ಹಿಂತೆಗೆದುಕೊಂಡರು.

## ಸಾಹಿತ್ಯ ಸಿಂಚನ

**ಕಾಯುತ್ತಿರುವೆ ಮಳೆರಾಯ**

ಕಾಯುತ್ತಿರುವೆ ಮಳೆರಾಯ
ಬಾಯಾರಿದ ಭೂಮಿತಾಯಿ

ಆಕಾಶ ನೋಡಿ ಕಣ್ಣು ನೋಯ್ತು
ಮೋಡ ಕಂಡು ಮನ ಸೊಲ್ತು
ಬಿರುಕು ಬಿಟ್ಟಿದೆ ಹೊಲದ ಎದೆ
ಕೆರೆಯ ನೀರು ಖಾಲಿ ಖಾಲಿ

ಬೀಜ ಬಿತ್ತಿ ತಿಂಗಳಾಯ್ತು
ಮೊಳಕೆ ಒಡೆಯದೆ ಮಣ್ಣಲ್ಲೇ ನಿಂತೈತೆ
ರೈತನ ಕಣ್ಣಲ್ಲಿ ಚಿಂತೆ ಕಟ್ಟೈತೆ
ಎಳೆ ಮಗು ಹಾಲಿಗೆ ಅಳೋದ್ ಕೇಳೈತೆ

ಬಾ ಮಳೆರಾಯ, ಬಾರೋ ಬೇಗ
ನಿನ್ನ ಹನಿಗೆ ಜೀವವಿದೆ
ಒಣಗಿದ ಕೆರೆ ತುಂಬಿ ಹರಿದು
ಹಸಿರು ಹಾಸು ಈ ನೆಲದ ಮೇಲೆ

ಗುಡುಗು ಸಿಡಿಲಿನ ಜೊತೆಯಾಗಿ
ಬಾರೋ ನನ್ನ ಮುದ್ದು ಮಳೆರಾಯ
ನಿನ್ನ ಕಾಯ್ತಿದೆ ಈ ಊರು
ನಿನ್ನ ನಂಬಿದೆ ಈ ಭೂತಾಯಿ

ಕಾಯುತ್ತಿರುವೆ ಮಳೆರಾಯ
ಕಣ್ಣೀರಲ್ಲೇ ಕಾದಿರುವೆ
ಒಂದು ಹನಿ ಬಿದ್ದರೆ ಸಾಕು
ಕೋಟಿ ಜೀವ ಉಳಿಯುತ್ತೆ

**ಎಸ್.ದುರಗಪ್ಪ.ಕುಷ್ಟಗಿ.**

# ಅನೈತಿಕ ಚಟುವಟಿಕೆಯ ತಾಣವಾದ ಬಾಲಕರ ವಸತಿ ನಿಲಯ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಸಂಪೂರ್ಣ ಹಾಳಾಗಿ ಅನೈತಿಕ ಚಟುವಟಿಕೆಗಳ ತಾಣಾವಾಗಿ ಮಾರ್ಪಟ್ಟಿದ್ದು ಮಕ್ಕಳು ವಸತಿ ನಿಲಯವಿಲ್ಲದೆ ಅಬ್ಯಾಸ ವಂಚಿತರಾಗುತ್ತಿದ್ದಾರೆ.**

ಈ ವಸತಿ ನಿಲಯದಲ್ಲಿ 5ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಪ್ರವೇಶ ಪಡೆದು ವಿದ್ಯಾಬದಯಾಸ ಮಾಡುತ್ತಿದ್ದು ಆದರೇ ಇಲ್ಲಿ ಯಾವುದೇ ವಿದ್ಯಾರ್ಥಿಗಳು ಇಲ್ಲದ ಕಾರಣ ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು , ಕಟ್ಟಡ ಕುಸಿಯುವ ಹಂತದಲ್ಲಿದೆ ಕಟ್ಟಡದ ಮೇಲ್ಛಾವಣಿ ಉದುರುತ್ತಿದ್ದು, ವಸತಿ ನಿಲಯವು ಒಟ್ಟು ನಾಲ್ಕು ಹಳೆಯ ಕೊಠಡಿಗಳನ್ನು ಮತ್ತು ಎರಡು ಹೊಸ ಕೊಠಡಿಗಳನ್ನು ಹೊಂದಿದ್ದು ಹಳೆಯ



**ಹಳೆಯ ಕಟ್ಟಡಗಳ ತೆರವಿಗೆ ಅನುಮೊದನೆ ಸಿಕ್ಕ ಬಳಿಕ ಅವುಗಳನ್ನು ತೆರವುಗೊಳಿಸಲಾಗುವುದು, ವಸತಿ ನಿಲಯಕ್ಕೆ ಕೇವಲ 25 ಅರ್ಜಿಗಳು ಮಾತ್ರ ಬಂದಿವೆ, ಹೆಚ್ಚಿಗೆ ಬಂದರೇ ಪಟ್ಟಣದಲ್ಲಿ ಬಾಡಿಗೆ ಕಟ್ಟಡ ಹುಡುಕಿ ವಸತಿ ನಿಲಯ ಪ್ರಾರಂಭಿಸಲಾಗುವುದು – ಭಾಗಯ್ಯ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ .ಮಾನ್ವಿ**

ಕೊಠಡಿಗಳ ಪೈಕಿಎಡರು ಎರಡು ಬಾಲಕರ ವಸತಿಗಾಗಿ ಒಂದು ಅಡುಗೆ ತಯಾರಿಕೆ ಕೊಣೆ



ಮತ್ತು ಆಹಾರ ದಾಸ್ತಾನು ಹಾಗೂ ಇನ್ನೊಂದು ಸ್ನಾನ ಗೃಹಕ್ಕೆ ಬಳಕೆ ಮಾಡಲಾಗುತ್ತಿತ್ತುಆದರೇ ನಾಲ್ಕು ಕೊಠಡಿಗಳು ಪಾಳುಬಿದ್ದು ಆವರಣದಲ್ಲಿ ಜಾಲಿ ಬೆಳೆದು ಪುಂಡಪೋಕ–ರಿಗಳ ಅನೈತಿಕ ಚಟುವಟಿಕೆಗಳ ತಾಣವಾಗಿದೆ. ಅಲ್ಲದೆ 2025–26ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹೆಚ್ಚುವರಿಯಾಗಿ ಎರಡು ಕೊಠಡಿಗಳನ್ನು ನಿರ್ಮಿಸಲಾಗಿದ್ದು ಆದರೇ ಇಲ್ಲಿನ ವಸತಿ ನಿಲಯವು ಖಾಸಗಿ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರಗೊಂಡ ಕಾರಣ ಹೊಸ ಕಟ್ಟಡ

**ಸದ್ಯಕ್ಕೆ ಹಿಗಿರುವ ಹೊಸ ಕಟ್ಟಡಗಳಲ್ಲಿ ವಸತಿ ನಿಲಯವನ್ನು ಆರಂಭಿಸುವ ಮೂಲಕ ಶಾಲಾ ವಿದ್ಯಾರ್ಥಿಗಳೀಗೆ ಅನುಕೂಲ ಮಾಡಿಕೊಡಬೇಕು ಅಲ್ಲದೆ ಹೆಚ್ಚುವರಿ ಕೊಠಡಿಗಳ ನಿರ್ಮಾಣ–ಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕು ಇಲ್ಲವಾದರೇ ಉಗ್ರ ಹೊರಾಟಕ್ಕೆ ಮುಂದಾಗಬೇಕಾಗುತ್ತದೆ– ಅಲ್ಲಮಪ್ರಭು ಕವಿತಾಳ, ರಾಜ್ಯ ಸಂಚಾಲಕರು ಬ.ದ.ಸಂ.ಸಮಿತಿ**

ಉದ್ಘಾಟನೆಯಾಗದೆ ಇದ್ದು ಇಲ್ಲದಂತಾಗಿದ್ದು ಸರ್ಕಾರದ ಹಣ ಮಾತ್ರ ಪೋಲಾಗುವುದು ತಪ್ಪಲಿಲ್ಲ ಹೊಸ ಕಟ್ಟಡ ಇದ್ದೂ ಇಲ್ಲದಂತಾಗಿದೆ ಬಳಕೆ ಇಲ್ಲದೆ ಅದೂ ಸಹ ವಿಷ–ಜಂತುಗಳ ವಾಸತಾಣವಾಗಿದೆ ಆದ್ದ–ರಿಂದ ಸಂಬಂಧಿಸಿದ ಅಧಿಕಾರಿಗಳು ಇತ್ತ ಕಡೆ ಗಮನ ಹರಿಸಿ ವಸತಿ ನಿಲಯದ ಪುನಃ ಪ್ರಾರಂಭಕ್ಕೆ ಕೈಗೊಳ್ಳಬೇಕು ಎಂದು ಸ್ಥಳಿಯರ ಒತ್ತಾಯವಾಗಿದೆ. **ವರದಿ : ಕವಿತಾ ಹಿರೇಮಠ**

# ವಾಹನ ಚಾಲಕರ ಸೇವೆ ಸ್ಮರಣೀಯ: ಪ್ರಭುಲಿಂಗ ಶ್ರೀ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಮ್ಮ ಜೀವದ ರಕ್ಷಣೆಗೆ ಹೆಚ್ಚು ಮಹತ್ವ ನೀಡದೆ ಪ್ರಯಾಣಿಕರ ಜೀವದ ರಕ್ಷಣೆ ಹಾಗೂ ಸುರಕ್ಷತೆ ಕುರಿತು ಸದಾ ಚಿಂತಿಸುವ ವಾಹನ ಚಾಲಕರ ಸೇವೆ ಸ್ಮರಣೀಯವಾದದ್ದಾಗಿದೆ ಎಂದು ಹಿಕ್ಕನಗುತ್ತಿ ಲಿಂಗಾಯತ ಮಹಾಮಠದ ಮ.ನಿ.ಪ್ರ. ಶ್ರೀ ಪ್ರಭುಲಿಂಗ ಮಹಾಸ್ವಾಮಿಗಳು ಹೇಳಿದರು.**

ಪಟ್ಟಣದ ರಾಜವಾಡೆ ಆವರಣದಲ್ಲಿ ಶ್ರೀ ವೀರರಾಣಿ ಕಿತ್ತೂರು ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿ ವತಿಯಿಂದ ಮೂರನೇ ವಾರ್ಷಿಕೋತ್ಸವ ಅಂಗವಾಗಿ ಹಮ್ಮಿಕೊಂಡ ಪುರಾಣ ಕಾರ್ಯಕ್ರಮದಲ್ಲಿ ವಾಹನ ಚಾಲಕರನ್ನು ಸನ್ಮಾನಿಸಿ ಅವರು ಆಶೀರ್ವಚನ ನೀಡಿದರು. ವಾಹನ ಚಾಲಕ–ರಿಗೆ ತಮ್ಮ ಕುಟುಂಬದ ಸದಸ್ಯರೊಂದಿಗೆ ಹೆಚ್ಚು



ಸಮಯವನ್ನು ಕೊಡಲೂ ಸಾಧ್ಯವಾಗುವುದಿಲ್ಲ. ಸದಾ ಒತ್ತಡದಲ್ಲಿ ಕೆಲಸ ಮಾಡುವ ಅವ–ರಿಗೆ ಭಗವಂತನ ರಕ್ಷಣೆ ಇರಲಿ ಎಂದು ನಮ್ಮ ಹಾರೈಕೆಯಾಗಿದೆ. ಪುರಾಣದ ಈ ಕಾರ್ಯಕ್ರಮದ ವೇದಿಕೆ ಮೇಲೆ ಅವರನ್ನು ಆಮಂತ್ರಿಸಿ ಗೌರವಿಸಿದ ಕಾರ್ಯ ಶ್ಲಾಘನೀಯವಾದದ್ದಾಗಿದೆ ಇದಕ್ಕೆ ನಾನು ಸಮಿತಿಯವರಿಗೆ ಅಭಿನಂದಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಸುಮಾರು 13 ಜನ ವಾಹನ ಚಾಲಕರಿಗೆ ಹಾಗೂ ಅವರ ಕುಟುಂಬಕ್ಕೆ ಸಮಿತಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ವೇಶ ಭೂಷಣತೊಟ್ಟ ಕುಮಾರಿ ಭವಾನಿ ಶಿವರಾಜ್ ಪಾಟೀಲ ಹಾಗೂ ಮಲ್ಲಸರ್ಜ ದೇಸಾಯಿ ಪಾತ್ರಧಾರಿ ಕುಮಾರ ಗೌರವ ಮಾರ್ಸನಳ್ಳಿ ಎಲ್ಲರ ಗಮನ ಸೆಳೆದು ಮೆಚ್ಚುಗೆಗೆ ಪಾತ್ರರಾದರು. ಕಾರ್ಯಕ್ರಮದಲ್ಲಿ ಸಮಿತಿಯ ಅಧ್ಯಕ್ಷೆ ನೀಲಮ್ಮಗೌಡತಿ ಪಾಟೀಲ, ಗೌರವ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ, ಚಂದ್ರಶೇಖರಯ್ಯ ಮಠಪತಿ, ಮಹದೇವಪ್ಪಗೌಡ ಪಾಟೀಲ(ಮಿಣಜಗಿ), ಬಸವರಾಜ ಕಾಟಾಪೂರ, ಸೇನಾಧಿಕಾರಿ ಮೊಹಮ್ಮದ್ ಯಸೂಫ ಹಾದಿಮನಿ, ಸಾಹೇಬಪಟೇಲ ಅಸ್ಕಿ,ಬಾಪುಗೌಡ ಪಾಟೀಲ, ವಿಶ್ವನಾಥ ಪಾಟೀಲ, ವಿದ್ಯಾ ವಿಶ್ವನಾಥ ಪಾಟೀಲ, ರಾಮನಗೌಡ ಬಿರಾದಾರ ಹಾಗೂ ಸಮಿತಿಯ ಪದಾಧಿಕಾರಿಗಳು ಇದ್ದರು.

## ಜೂನ್ 20ರಂದು ಜೆಸ್ಕಾಂ ಗ್ರಾಹಕರ ಸಂವಾದ ಸಭೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 18 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ 01 ಕಚೇರಿಯಲ್ಲಿ ಜೂನ್ 20ರ ಬೆಳಿಗ್ಗೆ 11ಗಂಟೆಗೆ ಜೆಸ್ಕಾಂ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದ್ದು, ವಿದ್ಯುತ್ ಗ್ರಾಹಕರು ವಿದ್ಯುತ್ ಕೊರತೆಗಳ ಬಗ್ಗೆ ಏನಾದರು ಸಮಸ್ಯೆ ಇದ್ದಲ್ಲಿ ಸಭೆಗೆ ಹಾಜಾರಾಗಿ ದೂರನ್ನು ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ 01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ನಾಡಗೌಡರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರಾದ ಸಿ.ಎಸ್. ನಾಡಗೌಡ ಅಪ್ಪಾಜಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಕರ್ನಾಟಕ ಪ್ರದೇಶ ಬೀದಿ ಬದಿ ವ್ಯಾಪಾರಿಗಳ ಒಕ್ಕೂಟ(ರಿ) ತಾಲೂಕಾಧ್ಯಕ್ಷ ಜುಮ್ಮಣ್ಣ ನಾಲತವಾಡ ಆಗ್ರಹಿಸಿದ್ದಾರೆ,**



ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಅವರು ಕಾಂಗ್ರೆಸ್ ಪಕ್ಷದಲ್ಲಿ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಹಾಗೂ ವಿವಿಧ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿರುವ ನಾಡಗೌಡರನ್ನು ಉದ್ದೇಶಪೂರ್ವಕವಾಗಿ ಸಚಿವ ಸಂಪುಟದಿಂದ ದೂರವಿಡಲಾಗುತ್ತಿದೆ ಎಂದು ಭಾಸವಾಗುತ್ತಿದೆ ಇದು ನಿಜಕ್ಕೂ ಕಳವಳಕಾರಿಯಾದ ವಿಷಯವಾಗಿದೆ. ನಾಡಗೌಡರು ಹಲವು ಪ್ರಮುಖ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸಿದ್ದು, ನಷ್ಟದಲ್ಲಿದ್ದ ಕೆಎಸ್‌ಡಿ–ಎಲ್ ಸಂಸ್ಥೆಯನ್ನು ಲಾಭದ ಹಾದಿಗೆ ತಂದಿದ್ದಾರೆ. 2023ರ ಚುನಾವಣಾ ಹೊಸ್ತಿಲಲ್ಲಿ ಪ್ರಚಾರದ ವೇಳೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಡಗೌಡರಿಗೆ ಸಚಿವ ಸ್ಥಾನ ಸಿಗುವ ಎಲ್ಲಾ ಅವಕಾಶಗಳಿವೆ ಎಂದು ಭರವಸೆ ನೀಡಿದ್ದರು. ಆದರೆ ಇದುವರೆಗೆ ಸಚಿವ ಸ್ಥಾನ ನೀಡದಿರುವುದು ಕ್ಷೇತ್ರದ ಜನರಲ್ಲಿ ತೀವ್ರ ನೋವುಂಟು ಮಾಡಿದೆ. ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ನಾಡಗೌಡರ ಹೆಸರನ್ನು ಪರಿಗಣಿಸದಿದ್ದರೆ ಕ್ಷೇತ್ರದಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದಎಂದು ಅವರು ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ನೀಟ್ ಪ್ರವೇಶ ಪತ್ರಿಕೆ ಡೌನ್‌ಲೋಡ್ ಮಾಡಿಕೊಳ್ಳಲು ಎನ್‌ಟಿಎ ಸಲಹೆ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಜೂ. 21 ರಂದು ನಿಗದಿಯಾಗಿರುವ ನೀಟ್–ಯುಜಿ 2026 ಮರುಪರೀಕ್ಷೆಗೆ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಅಭ್ಯರ್ಥಿಗಳಿಗೆ ಜ್ಞಾಪನಾ ಸಂದೇಶಗಳು, ಇಮೇಲ್‌ಗಳು ಮತ್ತು ವಾಟ್ಸಾಪ್ ಅಧಿಸೂಚನೆಗಳನ್ನು ಕಳುಹಿಸುತ್ತಿದ್ದು, ವಂಚನೆಯ ಸಂದೇಶಗಳು ಮತ್ತು ನಕಲಿ ಸಂವಹನಗಳ ವಿರುದ್ಧ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಿದೆ.**

ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ನೀಟ್–ಯುಜಿ ಪರೀಕ್ಷೆಯನ್ನು ಮೂಲತಃ ಈ ವರ್ಷ ಮೇ 3 ರಂದು ನಡೆಸಲಾಗಿತ್ತು, ಆದರೆ ಪ್ರಶ್ನೆಪತ್ರಿಕೆ ಸೋ–ರಿಕೆಯ ಆರೋಪದಿಂದಾಗಿ ಮೇ 12 ರಂದು ರದ್ದುಗೊಳಿಸಲಾಯಿತು. ಕೇಂದ್ರೀಯ




ತನಿಖಾ ದಳ (ಸಿಬಿಐ) ಪ್ರಸ್ತುತ ಈ ವಿಷಯದ ಬಗ್ಗೆ ತನಿಖೆ ನಡೆಸುತ್ತಿದೆ.21 ಜೂನ್ 2026 ರಂದು ಮರುಪರೀಕ್ಷೆಗಾಗಿ ತಮ್ಮ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಎನ್‌ಟಿಎ ಅಭ್ಯರ್ಥಿಗಳಿಗೆ ಜ್ಞಾಪನಾ ಮತ್ತು ಇಮೇಲ್‌ಗಳನ್ನು ಕಳುಹಿಸುತ್ತಿದೆ ಎಂದು ಸಂಸ್ಥೆ ಎಕ್?ಸನಲ್ಲಿನ ಸಾರ್ವಜನಿಕ ಸಲಹೆಯಲ್ಲಿ ತಿಳಿಸಿದೆ.

ಈ ಪ್ರಕ್ರಿಯೆಗೆ ಅಧಿಕೃತ ವೆಬ್‌ಸೈಟ್ ಮಾತ್ರ ಬಳಸಬೇಕು ಎಂದು ಅದು ಪುನರುಚ್ಚರಿಸಿದೆ; ಪ್ರವೇಶ ಪತ್ರಿಕೆ ಡೌನ್‌ಲೊಡ್‌ಗೆ ಎಂದಿಗೂ ಯಾವುದೇ ಪಾವತಿಯನ್ನು ಕೇಳುವುದಿಲ್ಲ, ಪರೀಕ್ಷಾ ಪತ್ರಿಕೆಗಳು, ಉತ್ತರ ಕೀಗಳು ಅಥವಾ ಸೋ–ರಿಕೆಯಾದ ವಿಷಯವನ್ನು ಕಳುಹಿಸುವುದಿಲ್ಲ ಅಥವಾ ನಿಮ್ಮ ಪ್ರವೇಶ ಪತ್ರವನ್ನು ಲಿಂಕ್ ಮೂಲಕ ಹಂಚಿಕೊಳ್ಳುವುದಿಲ್ಲ ಎಂದು ಸಲಹಾ ಸಂಸ್ಥೆ ಹೇಳಿದೆ, ನೀವು ಅಂತಹ ಯಾವುದೇ ಸಂದೇಶವನ್ನು ಸ್ವೀಕರಿಸಿದರೆ, ಕ್ಲಿಕ್ ಮಾಡಬೇಡಿ. ಅದನ್ನು ವರದಿ ಮಾಡಿ ಎಂದಿದೆ.

ಜೂನ್ 21 ರ ಮರು ಪರೀಕ್ಷೆಗೆ ಈಗಾಗಲೇ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಂಡಿರುವ ಅಭ್ಯರ್ಥಿಗಳು ಮತ್ತೆ ಅವುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅಗತ್ಯವಿಲ್ಲ. ಎಸ್‌ಎಂಎಸ್/ಇಮೇಲ್/ ವಾಟ್ಸಾಪ್ ಸಂದೇಶಗಳು ಪ್ರಾಥಮಿಕವಾಗಿ ತಮ್ಮ ಹೊಸ ಪ್ರವೇಶ ಪತ್ರಗಳನ್ನು ಇನ್ನೂ ಡೌನ್‌ಲೋಡ್ ಮಾಡಿಕೊಳ್ಳದ ವಿದ್ಯಾರ್ಥಿಗಳಿಗೆ ಮಾತ್ರ ಎಂದು ಅದು ಹೇಳಿದೆ.ಇದಲ್ಲದೆ, ಮೇ 3 ರ ಪರೀಕ್ಷೆಗೆ ನೀಡಲಾದ ಪ್ರವೇಶ ಪತ್ರಗಳು ಇನ್ನು ಮುಂದೆ ಮಾನ್ಯವಾಗಿಲ್ಲ ಎಂದು ಎನ್‌ಟಿಎ ತಿಳಿಸಿದೆ.

ಜೂನ್ 21 ರ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡುವುದು ಮತ್ತು ಮುದ್ರಿಸುವುದು ಒಮ್ಮೆ ಸಾಕು ಎಂದು ಎನ್‌ಟಿಎ ಹೇಳಿದೆ.ಅಧಿಕೃತ ವೆಬ್‌ಸೈಟ್‌ನಿಂದ ಮಾತ್ರ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಮತ್ತು ಗೊತ್ತುಪಡಿಸಿದ ವರದಿ ಮಾಡುವ ವೇದಿಕೆ ಅಥವಾ ಸೈಬರ್ ಅಪರಾಧ ಸಹಾಯವಾಣಿಗಳ ಮೂಲಕ ಅನುಮಾನಾಸ್ಪದ ಸಂದೇಶಗಳನ್ನು ವರದಿ ಮಾಡಲು ಸಂಸ್ಥೆ ಅಭ್ಯರ್ಥಿಗಳಿಗೆ ಸೂಚಿಸಿದೆ.

# ಜೂ.26ಕ್ಕೆ 'ರಕ್ಷಕ –2' ಚಲನಚಿತ್ರ ರಾಜ್ಯಾದ್ಯಂತ ಬಿಡುಗಡೆಗೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸರ್ವೇಶ ಸ್ಟುಡಿಯೋ ಬ್ಯಾನರ್ ಅಡಿಯಲ್ಲಿ 'ರಕ್ಷಕ–2' ಕನ್ನಡ ಚಲನಚಿತ್ರವು ಇದೆ ಜೂ.26ರಂದು ರಾಜ್ಯಾದ್ಯಂತ ತೆರೆ ಕಾಣುತ್ತಿದೆ.**

ಈ ಹಿಂದೆ ಶತದಿನೋತ್ಸವ ಕಂಡ ರಕ್ಷಕ, ದೊಡ್ಡಣ್ಣ ಪುಟ್ಟಣ್ಣ ಚಿತ್ರದ ನಿರ್ದೇಶಕರಾದ ಡಾ. ಆರ್ ವಿಜಯ್ ಕುಮಾರ್ ನಟಿಸಿ ನಿರ್ದೇಶನ ಮಾಡಿರುವ ಮೂರನೇ ಚಿತ್ರವಿದು. ಈ ಚಿತ್ರದಲ್ಲಿ ಲವ್– ಆಕ್ಷನ್–ಫ್ಯಾಮಿಲಿ ಸಸ್ಪೆನ್ಸ್–ಥ್ರಿಲ್ಲರ್, ಕಾಮಿಡಿ ಜೊತೆಗೆ ಚಿತ್ರದಲ್ಲಿ ಮೂರು ಹಾಡುಗಳಿವೆ. ಮನೆಮಂದಿಯೆಲ್ಲ ಒಟ್ಟಿಗೆ




ಕುಳಿತು ನೋಡುವ ಚಿತ್ರವಾಗಿದೆ. ಪ್ರೇಕ್ಷಕರು ಚಿತ್ರಮಂದಿರಕ್ಕೆ ಬಂದು ಚಿತ್ರವನ್ನು ನೋಡಿ ಪ್ರೋತ್ಸಾಹಿಸಬೇಕು ಎಂದು ನಿರ್ದೇಶಕ ಆರ್.ವಿಜಯಕುಮಾರ್ ತಿಳಿಸಿದ್ದಾರೆ.

ಬೆಂಗಳೂರು ನಗರದ ಸುತ್ತಮುತ್ತ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದ್ದು ಪ್ರಮುಖ ಪಾತ್ರದಲ್ಲಿ ಚಿತ್ರದ ನಿರ್ದೇಶಕ ಡಾ. ಆರ್ ವಿಜಯ್ ಕುಮಾರ್ ಅವರು ದಕ್ಷ ಪೊಲೀಸ್ ಅಧಿಕಾರಿ ಪಾತ್ರದಲ್ಲಿ , ಖ್ಯಾತ ಹಾಸ್ಯ ನಟ ಲಯಕೋಕಿಲ ಹೆಡ್ ಕಾನ್ಸ್ಟೇಬಲ್ ಆಗಿ ಅಭಿನಯಿಸಿದ್ದು ನಾಯಕ ನಟರಾಗಿ ರಾಜವಂಶಿ, ನಾಯಕಿಯಾಗಿ ರಾಧಿಕಾ ,ಮುಖ್ಯ ಪಾತ್ರದಲ್ಲಿ ಮಧುಶ್ರೀ ಖಳನಾಯಕನಾಗಿ ಹಿರಿಯ ನಟ ಸುರೇಂದ್ರ ಕುಮಾರ್, ಮುರಳಿಕೃಷ್ಣ, ವಿಜಯ್ ಮಧಾಳೇ, ಅರವಿಂದ್, ರೋಹಿಣಿ ಮೊದಲಾದವರು ಅಭಿನಯಿಸಿದ್ದಾರೆ. =ಛಾಯಾಗ್ರಹಣ ವಿಜಯ್ ಮಧಾಳೇ ಮತ್ತು ಆಕಾಶ, ಸಂಕಲನ ವಿಜಯ್ ಮಧಾಳೇ, ಸಾಹಸ ವೈಲೆಂಟ್ ವೇಲು, ಪ್ರಸಾಧನ ಜೀವನ್, ಪಿಆರ್ ಓ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ಕಥೆ–ಚಿತ್ರಕಥೆ–ಸಂಭಾಷಣೆ–ಸಂಗೀತದ ಜೊತೆಗೆ ನಿರ್ದೇಶನವನ್ನು ಡಾ. ಆರ್ ವಿಜಯಕುಮಾರ್ ಮಾಡಿದ್ದಾರೆ. ನಿರ್ಮಾಪಕ ವಿ.ಶಿವ್ ಸರ್ವೇಶ್ ಅವರು ಚಿತ್ರವನ್ನು ನಿರ್ಮಿಸಿದ್ದು ವಿಎಸ್ ಕೆ ಸಿನೆ ಕ್ರಿಯೇಷನ್ಸ್ ವಿಶಾಲ ಕರ್ನಾಟಕಕ್ಕೆ ಹಂಚಿಕೆದಾರರಾಗಿದ್ದಾರೆ.

–ಡಾ.ಪ್ರಭು ಗಂಜಿಹಾಳ

# ಲಸಿಕೆಯಿಂದ ತಡೆಗಟ್ಟಬಹುದಾದ ಖಾಯಿಲೆಗಳ ತಡೆಗೆ ಸಕಾಲದಲ್ಲಿ ಮಕ್ಕಳಿಗೆ ಲಸಿಕೆ ಹಾಕಿಸುವಲ್ಲಿ ಶ್ರಮವಹಿಸಿ.

❑ ನೈಜ್ಯ ದೆಸೆ ನ್ಯೂಸ್

**ಪ್ರಸ್ತುತ ಮಕ್ಕಳಿಗೆ ಹಾಕಲಾಗುವ 12 ಮಾರಕ ರೋಗಗಳ ವಿರುದ್ದದ ಲಸಿಕೆಗಳನ್ನು ಮಗುವಿನ ವಯಸ್ಸಿಗನುಗುಣವಾಗಿ ಆಯಾ ವಾರ ಅಥವಾ ತಿಂಗಳಿನಲ್ಲಿ ಹಾಕಿಸುವ ಮೂಲಕ ಸಂಭಾವ್ಯ ಖಾಯಿಲೆಗಳನ್ನು ತಡೆಗಟ್ಟಲು ಸಾಧ್ಯವಿದೆ ಎಂದು ಪಾಲಕರಿಗೆ ನಿರಂತರವಾಗಿ ಮನವರಿಕೆ ಮಾಡಿ ಎಂದು ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭಾಭವನದಲ್ಲಿ ತಾಲೂಕಾ ಆರೋಗ್ಯಾಧಿಕಾರಿಗಳಿಗೆ, ಮಕ್ಕಳ ತಜ್ಞರಿಗೆ, ವೈದ್ಯಾಧಿಕಾರಿಗಳಿಗೆ ಹಾಗೂ ತಾಲೂಕಾ ಮೇಲ್ವಿಚಾರಕರಿಗೆ ಹಮ್ಮಿಕೊಂಡ ಲಸಿಕೆಗಳಿಂದ ತಡೆಗಟ್ಟಬಹುದಾದ ಖಾಯಿಲೆಗಳು ಹಾಗೂ ಜೂನ 28 ನೇಯ ತಾರೀಖಿನಂದು ಜರಗುವ ಪಲ್ಸ್ ಪೋಲಿಯೊ ಕುರಿತು ಕಾರ್ಯಾಗಾರದಲ್ಲಿ ಮಾತನಾಡಿ ಸಾರ್ವತ್ರಿಕ ಲಸಿಕಾ



ಕಾರ್ಯಕ್ರಮದಡಿ ಮಗುವಿನ ವಯಸ್ಸಿಗನುಗುಣವಾಗಿ ಪ್ರತಿ ಗುರುವಾರ ಲಸಿಕಾ ದಿನವೆಂದು ಗುರ್ತಿಸಿ ಲಸಿಕೆ ಹಾಕಲಾಗುತ್ತಿದ್ದು, ವೈಯಕ್ತಿಕ ಕಾರಣದಿಂದ ಮಗುವಿಗೆ ಹಾಕುವ ಲಸಿಕೆಗಳನ್ನು ಸರಿಯಾದ ಸಮಯಕ್ಕೆ ಹಾಕಿಸಲು ತಾಯಂದಿರಿಗೆ, ಕುಟುಂಬದ ಸದಸ್ಯರಿಗೆ ನಿರಂತರವಾಗಿ ತಿಳಿಸಬೇಕಿದೆ, ಅಲ್ಲದೆ ಬರುವ ಜೂನ 28 ರಂದು ಜರಗುವ ಪಲ್ಸ್ ಪೋಲಿಯೊ ಕಾರ್ಯಕ್ರಮದಲ್ಲಿ 05 ವರ್ಷದೊಳಿನ ಮಕ್ಕಳಿಗೆ ಲಸಿಕೆ ಹಾಕಿಸಲು ಜಾಗೃತಿ ನೀಡಲು ತಿಳಿಸಿದರು.

ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ಮಾತನಾಡಿ, ಯಾವುದೇ ಕಾರಣವಿಲ್ಲದೆ 15



ವರ್ಷದೊಳಗಿನ ಮಕ್ಕಳಿಗೆ ಕೈ ಅಥವಾ ಕಾಲುಗಳ ಸ್ವಾಧಿನ ಇಲ್ಲದಂತಾದರೆ ತಕ್ಷಣ ಮಾಹಿತಿ ನೀಡುವುದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಇದರಿಂದ ಬೇರೆ ಕಾಯಿಲೆಗಳ ಪತ್ತೆಗೆ ಹಾಗೂ ಮಗುವಿನ ಆರೋಗ್ಯದ ಸಮಸ್ಯೆಗೆ ತಕ್ಷಣ ಚಿಕಿತ್ಸೆಗೆ ಸಹಕಾರಿಯಾಗುವುದು ಎಂದು ತಿಳಿಸಿದರು.

ವಿಶ್ವ ಆರೋಗ್ಯ ಸಂಸ್ಥೆಯ ಕಲಬುರ್ಗಿ ವಲಯದ ಸರ್ವೆಕ್ಷಣಾಧಿಕಾರಿ ಡಾ ಅನೀಲ್ ತಾಳಿಕೋಟೆ, ತರಬೇತಿ ನೀಡಿ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಅಫಘಾನಿಸ್ತಾನ ಗಳಲ್ಲಿ ಹೊಸ ಪೋಲಿಯೊ ಪ್ರಕರಣಗಳ ವರದಿ ಹಾಗೂ ಅಫಘಾನಿಸ್ಥಾನದ ಕಂಡು ಬಂದ ವೈರಸ್ ನ ಸಾಮ್ಯತೆಯು ಪಶ್ಚಿಮ ಆಫ್ರಿಕಾ ಖಂಡದಲ್ಲಿ ಕಂಡು ಬಂದ ಹಿನ್ನಲೆ ಭಾರತ ಸರಕಾರ ಜೂನ್ 28 ರಂದು ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಹಮ್ಮಿಕಂಡಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮಾಧಿಕಾರಿ ಡಾ ಶಿವಕುಮಾರ್ ನಾರಾ, ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ ಬನದೇಶ, ಡಾ ಅಮರೇಶ್ ಪಾಟೀಲ್, ಡಾ ಅಯ್ಯನಗೌಡ, ಡಾ ಶರಣಬಸವರಾಜ್, ಡಾ ಅಮೃತ್ ಹುಕ್ಕೇರಿ, ಡಿಹೆಚ್‌ಇಓ ಈಶ್ವರ ಹೆಚ್ ದಾಸಪ್ಪನವರ, ಡಿವೈಎಚ್‌ಇಓ ಬಸಯ್ಯ, ಡಿಪಿ–ಎಮ್ ನವೀನ್, ಎಮ್ ಆಂಡ್ ಇ ಗುರುಗಪ್ಪಾ, ಐಎಫ್‌ವಿ ರಾಘವೇಂದ್ರ ಸೇರಿದಂತೆ ಜಿಲ್ಲೆಯ ಎಲ್ಲ ಮಕ್ಕಳ ತಜ್ಞರು, ವೈದ್ಯಾಧಿಕಾರಿಗಳು, ತಾಲೂಕಾ ಮೇಲ್ವಿಚಾರಕರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**ತುಮಕೂರು ಗೃಹರಕ್ಷಕ ದಳ ನೇಮಕಾತಿ ೨೦೨೬ ? ೨೩೪ ಗೃಹರಕ್ಷಕ ದಳ/ಗೃಹರಕ್ಷಕ ದಳದ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ ೧೯, ೨೦೨೬**

ತುಮಕೂರು ಗೃಹರಕ್ಷಕ ದಳ ನೇಮಕಾತಿ ೨೦೨೬: ೨೩೪ ಗೃಹರಕ್ಷಕ ದಳ/ಗೃಹರಕ್ಷಕ ದಳದ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ತುಮಕೂರು ಗೃಹರಕ್ಷಕ ದಳ ಜೂನ್ ೨೦೨೬ ರ ಅಧಿಕೃತ ಅಧಿಸೂಚನೆಯ ಮೂಲಕ ಗೃಹರಕ್ಷಕ ದಳ/ ಗೃಹರಕ್ಷಕ ದಳದ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತುಮಕೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ೩೦-ಜೂನ್-೨೦೨೬ ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: ೧೬-೦೬-೨೦೨೬ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯದಿನಾಂಕ:೩೦-ಜೂನ್-೨೦೨೬
ಅಧಿಕೃತ ವೆಬ್‌ಸೈಟ್: tumkur.nic.in

## ಜಾಲಹಳ್ಳಿ ಸರ್ಕಾರಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಶಾಲೆ ಸ್ಥಳಾಂತರಕ್ಕೆ ಆಗ್ರಹಿಸಿ ಎಸ್‌ಎಫ್‌ಐ ಬೃಹತ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಜಾಲಹಳ್ಳಿ ಗ್ರಾಮದ ಸರ್ಕಾರಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಶಾಲೆಯನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್-ಎಫ್‌ಐ) ದೇವದುರ್ಗ ತಾಲೂಕು ಸಮಿತಿಯ ನೇತೃತ್ವದಲ್ಲಿ ಶುಕ್ರವಾರ ಶಾಲೆಯ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.**

ಈ ಕುರಿತು ಎಸ್‌ಎಫ್‌ಐ ಸಂಘಟನೆಯು ಜೂನ್ 16ರಂದು ರಾಯಚೂರು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿ, ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಿತ್ತು. ಶಾಲೆ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು
*ಹಲವು ವರ್ಷಗಳಿಂದ ಸ್ವಂತ ಕಟ್ಟಡವಿಲ್ಲದೆ ಖಾಸಗಿ ಕಟ್ಟಡದಲ್ಲೇ ಶಾಲೆ ಕಾರ್ಯನಿರ್ವಹಿಸುತ್ತಿದೆ.
* ಹಟ್ಟಿ?ಜಾಲಹಳ್ಳಿ ಮುಖ್ಯ ರಸ್ತೆಯ ಪಕ್ಕದಲ್ಲಿರುವ ಶಾಲೆಯ ಪ್ರವೇಶ ದ್ವಾರ ರಸ್ತೆ ಅಂಚಿನಲ್ಲೇ ಇರುವುದರಿಂದ ವಿದ್ಯಾರ್ಥಿಗಳ ಸುರಕ್ಷತೆಗೆ ಆತಂಕ ಉಂಟಾಗಿದೆ.



* ಶುದ್ಧ ಕುಡಿಯುವ ನೀರು, ಸಮರ್ಪಕ ಶೌಚಾಲಯ ಹಾಗೂ ಆಟದ ಮೈದಾನದಂತಹ ಮೂಲಭೂತ ಸೌಕರ್ಯಗಳ ಕೊರತೆ ಇದೆ.
* ಶಾಲೆಯ ಸುತ್ತಮುತ್ತ ಅಕ್ರಮ ಮದ್ಯ ಹಾಗೂ ಧೂಮಪಾನ ವಸ್ತುಗಳ ಮಾರಾಟ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮ ಬೀರುವ ಭೀತಿ ಎದುರಾಗಿದೆ.

ಅಧಿಕಾರಿಗಳ ವಿಳಂಬ ಧೋರಣೆಗೆ ಎಸ್‌ಎಫ್‌ಐ ಆಕ್ರೋಶ ಈ ಹಿಂದೆ ಶಾಲೆಯನ್ನು ಸ್ಥಳಾಂತರಿಸಲು ಜಾಲಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ಬಳಸುವ ಕುರಿತು ಪರಿಶೀಲನೆ ನಡೆಸಿ ಅನುಮತಿಗಳೂ ಲಭ್ಯವಾಗಿದ್ದರೂ, ಸ್ಥಳಾಂತರ ಪ್ರಕ್ರಿಯೆ ವಿಳಂಬವಾಗುತ್ತಿರುವುದನ್ನು ಎಸ್‌ಎಫ್‌ಐ ಖಂಡಿಸಿತು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಶಾಲೆಗೆ ಬೀಗ ಹಾಕಿ ವಿದ್ಯಾರ್ಥಿಗಳು, ಪಾಲಕರು ಹಾಗೂ ಸಾರ್ವಜನಿಕರೊಂದಿಗೆ ಸೇರಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಸಂಘಟನೆ ಎಚ್ಚರಿಕೆ ನೀಡಿತ್ತು.

ಲಿಖಿತ ಭರವಸೆಯ ಬಳಿಕ ಪ್ರತಿಭಟನೆ ಹಿಂಪಡೆತ

**ಪ್ರಸ್ತುತ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಶಾಲೆ ಕಾರ್ಯನಿರ್ವಹಿಸುತ್ತಿರುವ ಕಟ್ಟಡದ ಬಾಡಿಗೆಯನ್ನು ಸರ್ಕಾರದಿಂದ ಪಾವತಿಸಲಾಗುವುದಾಗಿ ಒಪ್ಪಿಗೆ ದೊರೆತಿ-ರುವುದಾಗಿ ಕಟ್ಟಡದ ಮಾಲೀಕರು ವರದಿಗಾರ-ರಿಗೆ ತಿಳಿಸಿದ್ದಾರೆ.**

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ವಿಸ್ತರಣಾಧಿಕಾರಿ ಮೈಬೂಬ್ ಸಾಬ್ ಅವರು, ಸೋಮವಾರದಿಂದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಶಾಲೆಯ ತರಗತಿಗಳನ್ನು ಜಾಲಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡದಲ್ಲಿ ನಡೆಸಲಾಗುವುದು ಎಂದು ಲಿಖಿತ ಭರವಸೆ ನೀಡಿದರು. ಈ ಭರವಸೆಯ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ಪ್ರತಿಭಟನೆಯನ್ನು ಹಿಂಪಡೆದಿತು. ಹೋರಾಟದಲ್ಲಿ ಭಾಗವಹಿಸಿದ ಮುಖಂಡರು ಎಸ್‌ಎಫ್‌ಐ ತಾಲೂಕು ಅಧ್ಯಕ್ಷ ಮಹಾಲಿಂಗ ದೊಡ್ಡಮನಿ, ಶಬ್ಬೀರ್, ಸಂತೋಷ ತ್ಯಾಪ್ಲಿ, ಶಿವು, ನರಸಣ್ಣ ನಾಯಕ, ಬಸವರಾಜ ಲಿಂಗದಹಳ್ಳಿ, ಯಲ್ಲಪ್ಪ ಸುಣ್ಣದಕಲ್, ಹನುಮಂತ ಸುಣ್ಣದಕಲ್, ರಿಯಾಜ್ ಆರ್ತಿ, ರಂಗನಾಥ, ಮೈಬೂ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಕೆ ಶಾಂತಪ್ಪ ಜಿಲಾ ಹಿಂದುಳಿದ ವರ್ಗಗಳ ಅದ್ಯಕ್ಷರಿಗೆ ನಿಗಮ ಮಂಡಳಿ ನೀಡಲು ಒತ್ತಾಯ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ : ತಾಲೂಕು ಹಿಂದುಳಿದ ವರ್ಗಗಳ ಒಕ್ಕೂಟದಿಂದ, ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದ ಅಧ್ಯಕ್ಷರಾದ ಕೆ ಶಾಂತಪ್ಪ ರಾಯಚೂರು ಇವರಿಗೆ ನಿಗಮ ಮಂಡಳಿ ಅಥವಾ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಪರಿಗಣಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ತಾಲ್ಲೂಕು ಹಿಂದುಳಿದ ವರ್ಗಗಳ ಒಕ್ಕೂಟದ ಅದ್ಯಕ್ಷ ಕರಿಯಪ್ಪ ಹಾಲಾಪೂರ ಪತ್ರಿಕೆಯೊಂದಿಗೆ ಮಾತನಾಡಿದರು,**



ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾಗಿ,ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿಭಾಯಿಸಿ ಹಿಂದುಳಿದ ಜನಾಂಗದ ನಾಯಕರಾಗಿ ಎಲ್ಲರ ಮನದಲ್ಲಿ ನೆಲೆಯುರಿದ್ದು, ಅದಕ್ಕೆ ಕೆ ಶಾಂತಪ್ಪ ಅವರಿಗೆ ಸೂಕ್ತ ಸ್ಥಾನಮಾನವನ್ನು ಸರಕಾರ ಕೂಡಲೇ ನೀಡಬೇಕೆಂದು ಸರಕಾರಕ್ಕೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ನಾಗಭೂಷಣ ಬಾರಿಕೇರ ಅದ್ಯಕ್ಷ ಕೃಷಿ ಪತ್ತಿನ ಸಹಕಾರ ಸಂಘ,ಬಸನಗೌಡ ಮಾರಲದಿನ್ನಿ,ಮಲ್ಲಯ್ಯ ಮುರಾ-ರಿ,ರವಿಕುಮಾರ ಮಡಿವಾಳ ಹಾಗೂ ಇನ್ನೂ ಅನೇಕರು ಇದ್ದರು.

## ಪ್ರಥಮ ಬಾರಿಗೆ ಕರಡಕಲ್ ಗ್ರಾಮದಲ್ಲಿ ಮೊಹರಂ ಶಾಂತಿ ಸಭೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಸೌಹಾರ್ದತೆಯ ಹಬ್ಬ ಮೊಹರಂ ಆಚರಣೆಗೆ ಪಟ್ಟಣದ ಕರಡಕಲ್ ನಲ್ಲಿ ಶಾಂತಿ ಸಭೆಯನ್ನು ಗ್ರಾಮದ ಹಿರಿಯರ ಸಮ್ಮುಖದಲ್ಲಿ ನಡೆಸಲಾಯಿತು.**

ಕರಡಕಲ್ ಗ್ರಾಮದಲ್ಲಿ ಯಾವುದೇ ಸಣ್ಣ-ಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ ಅವುಗಳನ್ನು ಬದಿಗೊತ್ತಿ, ಮುಂಬರುವ ಮೊಹರಂ ಹಾಗೂ ಪ್ರತಿಯೊಂದು ಹಬ್ಬ , ಜಾತ್ರೆ, ಕಾರ್ಯಕ್ರಮಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಮತ್ತು ಸೌಹಾರ್ದಯುತವಾಗಿ ನಡೆಸಿಕೊಂಡು ಹೋಗಲು ಸಕಲ ಸಮುದಾಯಗಳ ಪ್ರಮುಖರು ಒಮ್ಮತದ ನಿರ್ಧಾರ ಕೈಗೊಂಡಿದ್ದಾರೆ. ಮೊಹರಂ ಶಾಂತಿ ಸಭೆ ಯಲ್ಲಿ ಯುವಕ-ರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಮಾತನಾಡಿದ ಪಿ ಐ ಹೊಸಕೇರಪ್ಪ



ಹಬ್ಬ ಹರಿದಿನಗಳ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಮತ್ತು ಸಮಾಜದಲ್ಲಿ ಶಾಂತಿ ಕಾಯ್ದುಕೊಳ್ಳುವ ಬಗ್ಗೆ ಯುವಕ-ರಿಗೆ ವಿಶೇಷ ಜಾಗೃತಿ ಮೂಡಿಸಿದರು. ಯುವ ಪೀಳಿಗೆಯು ಯಾವುದೇ ವದಂತಿಗಳಿಗೆ ಕಿವಿಗೊಡದೆ, ಸರ್ವ ಧರ್ಮೀಯರೊಂದಿಗೆ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸಿ ಸಂಭ್ರಮಿಸಬೇಕು ಎಂದು ಅವರು ಕರೆ ನೀಡಿದರು. ಗಿರಿ ಮಲ್ಲನಗೌಡ ಪಾಟೀಲ್ ಅವರು ಮಾತನಾಡಿ, ನಮ್ಮೂರಿನಲ್ಲಿ ಈ ಹಿಂದೆ ಇದ್ದ ಸಣ್ಣ-ಪುಟ್ಟ ಜಗಳ, ಭಿನ್ನಾಭಿಪ್ರಾಯಗಳನ್ನು ಮರೆತು, ಪ್ರತಿಯೊಂದು ಜಾತ್ರೆ-ಹಬ್ಬದ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಮುಂದೆ ಸಾಗಬೇಕು. ಎಲ್ಲಾ ಸಮುದಾಯದವರು ಒಂದಾಗಿ ಸೇರಿಕೊಂಡು ಹಬ್ಬ ಆಚರಣೆ ಮಾಡುವ ಮಹೋತ್ಸವದ ಸಂಸ್ಕೃತಿಯನ್ನು ನಾವು ತಂದಿದ್ದೇವೆ, ಇದು ಹೀಗೆಯೇ ಮುಂದುವರಿಯಲಿ ಸೌಹಾರ್ದತೆಯ ಸಾಗರವಾಗಲಿ ಕರಡಕಲ್ ಎಂದು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಪ್ರಮುಖರು ಈ ಮಹತ್ವದ ಶಾಂತಿ ಸಭೆಯಲ್ಲಿ ಊರಿನ ಹಾಗೂ ವಿವಿಧ ಸಂಘಟನೆಗಳ ಪ್ರಮುಖ ಮುಖಂಡರು ಉಪಸ್ಥಿತರಿದ್ದು, ತಮ್ಮ ಬೆಂಬಲ ಸೂಚಿಸಿದರು ಈ ಸಂದರ್ಭದಲ್ಲಿ ಮೋಹನ್ ಗೋಸ್ಲೆ ಲಿಂಗಸಗೂರು, ಮಸ್ಕಿ, ಸಿಂಧನೂರು ಕ್ಷೇತ್ರಗಳ ಖಅ ಖಖ ದೌರ್ಜನ್ಯ ತಡೆ ಸಮಿತಿ ನಾಮನಿರ್ದೇಶಿತ ಸದಸ್ಯ , ಒ.ಖ.ಪಾಟೀಲ್ , ಶರಣಗೌಡ ಪಾಟೀಲ್ ಜೀವನ ಗೌಡ, ಸೋಮನಾಥ್ ಗೌಡ, ರುದ್ರಯ್ಯ ಸ್ವಾಮಿ, ಶರಣಪ್ಪ ಚಿನ್ನೂರು, ಆಜಪ್ಪ ಕರಡಕಲ್ , ರಹಿಮ್ ಸಾಬ್, ಬಾಬು, ಅಮರೇಶ್ ಮ್ಯಾಗೇರಿ , ವಿರೇಶ ಭೋವಿ, ರಮೇಶ್ ಕಟ್ಟಿಮನಿ, ತಿಮ್ಮಣ್ಣ ಭಜಂತ್ರಿ, ಶರಣಬಸವ ಗಲಗ , ಹಾಗೂ ಸರ್ವ ಸಮುದಾಯಗಳ ಮುಖಂಡರು ಇದ್ದರು.

## ಇಂದು ವಿದ್ಯುತ್ ವ್ಯತ್ಯಯ-ಕವಿತಾಳ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಳಿಗೆ ವಿದ್ಯುತ್ ಪೂರೈಕೆಯಲ್ಲಿ ದಿನಾಂಕ 20.06.2016 ಶನಿವಾರದಂದು ವ್ಯತ್ಯಯ ಉಂಟಾಗಲಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪ ವಿಭಾಗ ಸಿರವಾರ ಅವರು ಪತ್ರಿಕಾ ಪರಕಟಣೆಯಲ್ಲಿ ತಿಳಿಸಿದ್ದಾರೆ.**




**ಕಾರಣ ಕವಿತಾಳ 110/11 ಕೆವಿ ಎಂ ಯು-ಎಸ್ ವಿದ್ಯುತ್ ಉಪಕೇಂದ್ರ ಕವಿತಾಳದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವತಿಯಿಂದ ಮೊದಲನೇ ತರೈಮಾಸಿಕ ನಿರ್ವಹಣೆ ಕಾಮಗಾಋಇ ಹಮ್ಮಿಕೊಂಡಿರುವುದರಿಂದ ಶನಿವಾರ 20.06.2026 ರಂದು ಬೆಳಿಗ್ಗೆ 9ರಿಂದ ಸಂಜೆ 6ಗಂಟೆಯವರೆಗೆ ಕವಿತಾಳ ವಿತರಣಾ ಕೇಂದ್ರದಿಂದ ಸರಬರಾಜು ಆಗುವ ಎಲ್ಲಾ11 ಕೆವಿ ಮಾರ್ಗಗಳು ವಿದಯುತ್ ಸರಬರಾಜು ಇರುವುದಿಲ್ಲ. ಆದ್ದರಿಂದ ಕವಿತಾಳ ಪಟ್ಟಣ ಪಂಚಾಯತ್ ಹಾಗೂ ಪಟ್ಟಣ ಪಂಚಾಯತ್ ವ್ಯಪ್ತಿಗೆ ಒಳಪಡುವ ನಾರಾಯಣ ಶೆಟ್ಟಿಕ್ಯಾಂಪ್, ಗಂಗಾನಗರ ಕ್ಯಾಂಪ್, ಚಿಕ್ಕಹಣಗಿ, ಹಿರೇಹಣಗಿ, ಹುಸೇನಪುರ, ಸೈದಾಪುರ, ತಿಮ್ಮಾಪೂರ, ಹುಡಾ, ಹೀರಾ, ಬುದ್ದಿನ್ನಿ, ಚಿಂಚರಕಿ, ಗುಡದಿನ್ನಿ ಗ್ರಾಮಗಳಿಗೆ ಮತ್ತು ರೈತರ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಸಾರ್ವಜನಿಕರು ಸಹಕರಿಸುವಂತೆ ತಿಳಿಸಿದ್ದಾರೆ.**

## ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಖಂಡಿಸಿ ಸಾಲಿಡಾರಿಟಿ ಯೂತ್ ಮೂವ್ಮೆಂಟ್‌ನಿಂದ ಶಾಂತಿಯುತ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಇತ್ತೀಚೆಗೆ ಸಿಂಧನೂರಿನಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ನಡೆದ ಅತ್ಯಾಚಾರ ಪ್ರಕರಣವನ್ನು ಖಂಡಿಸಿ ಹಾಗೂ ಆರೋಪಿಗೆ ಕಾನೂನಿನ ಅಡಿಯಲ್ಲಿ ಅತ್ಯಂತ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಸಾಲಿಡಾ-ರಿಟಿ ಯೂತ್ ಮೂವ್ಮೆಂಟ್, ಸಿಂಧನೂರು ಘಟಕದ ವತಿಯಿಂದ ಶುಕ್ರವಾರ ಶಾಂತಿಯುತ ಪ್ರತಿಭಟನೆ ನಡೆಸಲಾಯಿತು.**

ಪ್ರತಿಭಟನೆಯಲ್ಲಿ ಮಾತನಾಡಿದ ಜಮಾಅತೆ ಇಸ್ಲಾಮಿ ಹಿಂದ್‌ನ ಹುಸೇನ್ ಸಾಬ್, "ಅಪ್ರಾಪ್ತ ಬಾಲಕಿಯ ಮೇಲೆ ನಡೆದಿರುವ ಈ ಅಮಾನವೀಯ ಕೃತ್ಯ ಇಡೀ ಮಾನವಕುಲವೇ ತಲೆತಗ್ಗಿಸುವಂತಹ ಘಟನೆ. ಇಂತಹ ಕೃತ್ಯಗಳು ನಾಗರಿಕ ಸಮಾಜಕ್ಕೆ ಕಳಂಕವಾಗಿದ್ದು, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಗಂಭೀರ ಆತಂಕವನ್ನು ಹುಟ್ಟುಹಾಕಿವೆ. ಆರೋಪಿಗೆ ಯಾವುದೇ ರೀತಿಯ ಸಡಿಲಿಕೆ ನೀಡದೆ ಪೋಕ್ಸೋ ಸೇರಿದಂತೆ ಅನ್ವಯವಾಗುವ ಎಲ್ಲಾ ಕಾನೂನುಗಳ ಅಡಿಯಲ್ಲಿ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು. ಜೊತೆಗೆ, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ, ಪೊಲೀಸ್ ಇಲಾಖೆ




ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಸಮಾಜದ ಪ್ರತಿಯೊಬ್ಬರೂ ಇಂತಹ ದುಷ್ಕೃತ್ಯಗಳ ವಿರುದ್ಧ ಧ್ವನಿ ಎತ್ತುವುದು ಇಂದಿನ ಅಗತ್ಯವಾಗಿದೆ" ಎಂದು ಒತ್ತಾಯಿಸಿದರು.

ಮನುಜಮತ ಬಳಗದ ಬಸವರಾಜ್ ಬಾದರ್ಲಿ ಮಾತನಾಡಿ, "ಮಹಿಳೆಯರು ಹಾಗೂ ಮಕ್ಕಳ ಸುರಕ್ಷತೆ ಕೇವಲ ಸರ್ಕಾರದ ಜವಾಬ್ದಾ-ರಿಯಲ್ಲ, ಇಡೀ ಸಮಾಜದ ಜವಾಬ್ದಾರಿಯಾಗಿದೆ. ಅಪ್ರಾಪ್ತ ಬಾಲಕಿಯ ಮೇಲೆ ನಡೆದಿರುವ ಈ ಘಟನೆ ಅತ್ಯಂತ ಖಂಡನೀಯವಾಗಿದ್ದು, ಇಂತಹ ಕೃತ್ಯ ಎಸಗುವವರ ವಿರುದ್ಧ ಯಾವುದೇ ರೀತಿಯ ಮೃದು ಧೋರಣೆ ತೋರಬಾರದು. ಶಾಲೆ, ಕಾಲೇಜು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಬಾಲಕಿ-ಯರು ಮತ್ತು ಮಹಿಳೆಯರು ಭಯಮುಕ್ತ ವಾತಾವರಣದಲ್ಲಿ ಬದುಕುವಂತಹ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು. ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ನಿರಂತರವಾಗಿರಲಿದೆ" ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಬಸವರಾಜ್ ಬಾದರ್ಲಿ (ಮನುಜಮತ ಬಳಗ), ಹುಸೇನ್ ಸಾಬ್ (ಜಮಾಅತೆ ಇಸ್ಲಾಮಿ ಹಿಂದ್), ಚಿಟ್ಟಿ ಬಾಬು (ಪ್ರಗತಿಪರ ಸಂಘಟನೆ), ಡಾ. ವಾಸಿಂ (ಜಿಲ್ಲಾ ಅಧ್ಯಕ್ಷರು, ಸಾಲಿಡಾರಿಟಿ ಯೂತ್ ಮೂವ್ಮೆಂಟ್), ಅಬುಲೈಸ್ ನಾಯ್ಕ್ (ಅಧ್ಯಕ್ಷರು, ಸಾಲಿಡಾರಿಟಿ ಯೂತ್ ಮೂವ್ಮೆಂಟ್ ಸಿಂಧನೂರು ಘಟಕ), ಇಸ್ಮಾಯಿಲ್ (ಉಪಾಧ್ಯಕ್ಷರು), ನಯೀಮ್ ಇರ್ಫಾನ್ (ಕಾರ್ಯದರ್ಶಿ), ಇಮ್ತಿಯಾಜ್ (ಎಸ್‌ಐಒ ಜಿಲ್ಲಾ ಅಧ್ಯಕ್ಷರು), ಅಫ್ಜಲ್ ಹುಸೇನ್ (ಎಸ್‌ಐಒ ತಾಲೂಕು ಅಧ್ಯಕ್ಷರು) ಹಾಗೂ ಖಾಜಾ ಪಾಷಾ ಗೋಡೇಕೆಟ್, ತನ್ವೀರ್, ಅಜರ್ ಹುಸೇನ್, ಫಾರೂಕ್ ಅತ್ತಾರ್, ಸನಾವುಲ್ಲಾ, ಉಸ್ಮಾನ್ ಸೇ-ರಿದಂತೆ ಅನೇಕರು ಉಪಸ್ಥಿತರಿದ್ದರು.

ಪ್ರತಿಭಟನೆಯ ಬಳಿಕ ತಹಶೀಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿ, ಆರೋಪಿಗೆ ಶೀಘ್ರ ನ್ಯಾಯ ಒದಗಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಹಾಗೂ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

## ಹಾಲಾಪೂರ: ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಅಧಿಕಾರಿಗಳು ಸ.ಪ್ರೌ.ಶಾಲೆಗೆ ಬೇಟಿ

❑ ನೈಜ್ಯ ದೆಸೆ ನ್ಯೂಸ್

**ಹಾಲಾಪೂರ: ಗ್ರಾಮದ ಸರಕಾರಿ ಪ್ರೌಢಶಾಲೆಗೆ ಜಿಲ್ಲಾ ಮಕ್ಕಳ ಹಕ್ಕುಗಳ ರಕ್ಷಣಾ ಅಧಿಕಾರಿ ಎಮ್ ಡಿ ಗೊಖಲೆ ಬೇಟಿ ನೀಡಿ ಮಾತನಾಡುತ್ತಾ ಮಕ್ಕಳು ಸರಿಯಾಗಿ ಶಾಲೆಗೆ ಬರಬೇಕು, ಸರಕಾರ ತಮಗಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ ಹಾಗೆ ಬಾಲಕಾರ್ಮಿಕ,ಬಾಲ್ಯವಿವಾಹ,ಪೊಕ್ಸೊ , ಇನ್ನೂ**




**ಮುಂತಾದ ಸಾಮಾಜಿಕ ವಿರೋಧಿ ಚಟುವಟಿಕೆಗಳ ವಿರುದ್ಧ ತಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕು,- ಅಂತಹ ಸಮಸ್ಯೆ ಕಂಡುಬಂದರೆ ನಮ್ಮನ್ನು ಸಂಪರ್ಕಿಸುವಂತೆ ಹೇಳಿದರು.**

ನಂತರ ಮಾನ್ವಿ ಬಿಇಒ ಚಂದ್ರಶೇಖರ ದೊಡ್ಡಮನಿ ಮಾತನಾಡಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳು ಶಿಕ್ಷಕರು ಹೇಳಿದ ಪಾಠ ಸರಿಯಾಗಿ ಅರ್ಥಮಾಡಿಕೊಂಡು,ನಿರಂತರ ಅಭ್ಯಾಸ, ಸತತ ಓದು ರೂಢಿ ಮಾಡಿಕೊಳ್ಳಿ, ಅತ್ಯುತ್ತಮ ಫಲಿತಾಂಶ ಪಡೆಯಬೇಕು ಎಂದು ಹೇಳಿದರು. ಈ ವೇಳೆಯಲ್ಲಿ ಕಿರಿಲಿಂಗಪ್ಪ ರಕ್ಷಣಾ ಅಧಿಕಾರಿ, ಹನುಮೇಶ ಸಾಂಖ್ಯಿಕ ಅಧಿಕಾರಿ, ಶಿವಾರಾಜ ಪಾಟೀಲ್ ಕಾನೂನು ಪರಿವೀಕ್ಷಕರು, ಸಿ ಆರ್ ಪಿ ಪ್ರಶಾಂತಗೌಡ ಪಾಟೀಲ್,ಮಂಜುನಾಥ ಮುಖ್ಯಗುರು,ಶಿಕ್ಷಕರಾದ ಆದೇಶ ಮಸ್ಕಿ, ರವೀಂದ್ರ ಕುಂಬಾರ,ಕಿರಣ-ಕುಮಾರ,ಯಮನಪ್ಪ ಹಾಗೂ ಇನ್ನಿತರರು ಇದ್ದರು.

## ಕಾರುಣ್ಯ ಆಶ್ರಮದ ಜೊತೆ ನಾವುಗಳು ಸದಾವಕಾಲವಿರುತ್ತೇವೆ – ಚಂದ್ರಶೇಖರ ರೆಡ್ಡಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿರವಾರ ಪಟ್ಟಣದ ಲಿಟ್ಲ್ ಏಂಜಲ್ಸ್ ಸ್ಕೂಲ್ ಸಂಸ್ಥಾಪಕರಾದ ಚಂದ್ರಶೇಖರ ರೆಡ್ಡಿ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಧನ ಸಹಾಯ ಮಾಡಿ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿದರು.**

ಈ ಸಮಯದಲ್ಲಿ ಸಿರವಾರದ ಲಿಟ್ಲ್ ಏಂಜಲ್ಸ್ ಸ್ಕೂಲ್ ಸಂಸ್ಥಾಪಕರಾದ ಚಂದ್ರಶೇಖರ ರೆಡ್ಡಿ ಅವರನ್ನು ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸನ್ಮಾನಿಸಿ ಗೌರವಿಸಿದರು. ನಂತರ ಚಂದ್ರಶೇಖರ ರೆಡ್ಡಿ ಮಾತನಾಡಿ ಕಾರುಣ್ಯಾಶ್ರಮದ ಸೇವೆಯು ಕಲ್ಯಾಣ



ಕರ್ನಾಟಕ ಭಾಗದ ಸಂಸ್ಥೆಗಳಿಗೆ ಮಾದರಿಯಾಗಿದೆ. ನಮ್ಮ ಸಂಸ್ಥೆಗಳು ಶಿಕ್ಷಣ ಸಂಸ್ಕಾರ ಕೊಟ್ಟರು ಕೂಡ ಈ ಕಾರುಣ್ಯಾಶ್ರಮವು ಸಂಸಾರದ ಪಾಠಶಾಲೆಯಾಗಿದೆ.

ಈ ಸಂಸ್ಥೆಗಳಿಗೆ ಹಲವಾರು ಪ್ರಶಸ್ತಿಗಳು ಸಿಗುವ ಮೂಲಕ ಆ ಪ್ರಶಸ್ತಿಗಳಿಗೆ ಶೋಭೆ ತಂದಂತಾಗಿದೆ. ಇವತ್ತಿನ ಕಾಲಮಾನದಲ್ಲಿ ಒಂದು ಕುಟುಂಬ ನಿರ್ವಹಣೆ ಮಾಡಬೇಕಾದರೆ ಹಲವಾರು ಕಷ್ಟಗಳ ಮಧ್ಯೆ ಬದುಕು ಸಾಗುತ್ತದೆ. ಆದರೆ ಈ ಆಶ್ರಮದಲ್ಲಿರುವ ಅದೆಷ್ಟೋ ಹಿರಿಯರು ಅಂಗವಿಕಲರು ವಿಶೇಷ ಚೇತನರು ಮತ್ತು ವಯಸ್ಕರ ಬುದ್ಧಿಮಾಂದ್ಯರು ಸಂತೋಷವಾಗಿರುವುದನ್ನು ಕಂಡರೆ ಈ ಸೇವೆಗೆ ನಾನು ನನ್ನನ್ನು ಅರ್ಪಣೆ ಮಾಡಿಕೊಂಡುಬಿತ್ತಿದ್ದೇನೆ. ನಮ್ಮ ಸಂಸ್ಥೆ ಹಾಗೂ ನಮ್ಮ ಕುಟುಂಬ ಹಾಗೂ ನನ್ನೆಲ್ಲಾ ಸ್ನೇಹ ಬಳಗ ಕಾರುಣ್ಯ ಆಶ್ರಮದ ಜೊತೆ ನಾವುಗಳು ಸದಾ?ವಕಾಲವಿರುತ್ತೇವೆ.

ಇಂತಹ ಅಭೂತಪೂರ್ವ ಸೇವೆಯನ್ನು ಸಮಾಜಕ್ಕೆ ಅರ್ಪಿಸಿರುವ ಒಬ್ಬ ಸಾಮಾನ್ಯ ದೇವಿ ಅರ್ಚಕನಾದ ಅಮರಯ್ಯ ಸ್ವಾಮಿ ಹಾಗೂ ಅವರ ಪುತ್ರ ಚನ್ನಬಸವಸ್ವಾಮಿ ಮತ್ತು ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಆಶ್ರಮಕ್ಕೆ ಸಹಾಯ ಸಹಕಾರ ಮಾಡುವ ಪ್ರತಿಯೊಬ್ಬ ದಾ-ರಿಗಳಿಗೂ ಕೂಡ ನಾನು ನನ್ನ ಹೃದಯಪೂರ್ವಕ ಧನ್ಯವಾದಗಳು ತಿಳಿಸುತ್ತಿದ್ದೇನೆ. ಮುಂದಿನ ದಿನಮಾನಗಳಲ್ಲಿ ನಮ್ಮ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಕೂಡ ಈ ಆಶ್ರಮದಲ್ಲಿ ಒಂದೆರಡು ದಿನಗಳ ಸೇವಾ ತರಬೇತಿಯನ್ನು ಪಡೆಯಲು ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆದು ಪ್ರವಾಸದ ಬದಲು ಇಂತಹ ಸ್ಥಳಕ್ಕೆ ವಿದ್ಯಾರ್ಥಿಗಳನ್ನು ಕರೆತರಬೇಕು ಎನ್ನುವ ಬಯಕೆ ನಮ್ಮ ಸಂಸ್ಥೆಯದ್ದು.

ಇಲ್ಲಿರುವ ಎಲ್ಲಾ ಆಶ್ರಯದಾತರುಗಳ ಆಶೀರ್ವಾದ ನಮ್ಮ ಸಂಸ್ಥೆ ಹಾಗೂ ನಮ್ಮ ಕುಟುಂಬದ ಮೇಲಿರಲಿ ಎನ್ನುವ ವಿನಂತಿಯೊಂದಿಗೆ ಕಾರುಣ್ಯ ಸಂಸ್ಥೆಗೆ ಅನಂತ ಕೋಟಿ ಕೋಟಿ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ ಎಂದು ಭಾವನಾತ್ಮಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಸಿರವಾರ ತಾಲೂಕ ಸುದ್ದಿಮೂಲ ಕನ್ನಡ ದಿನಪತ್ರಿಕೆ ವರದಿಗಾರರಾದ ಸುರೇಶ ಹೀರಾ ಮಾತನಾಡಿ ನಾನು ಆಶ್ರಮಕ್ಕೆ ಸುಮಾರು ಸಾರಿ ಭೇಟಿ ನೀಡಿದ್ದೇನೆ ಆಶ್ರಮದ ನಿಸ್ವಾರ್ಥ ಸೇವಾ ಕಾರ್ಯಗಳು ಮತ್ತು ಸಮಾಜದಲ್ಲಿನ ವಿಭಿನ್ನ ಕಾರ್ಯಗಳು ನನಗೆ ನನ್ನ ಮನಸ್ಸಿಗೆ ಇಷ್ಟವಾಗಿವೆ.

ಇಂತಹ ಪುಣ್ಯಕಾರ್ಯಗಳಲ್ಲಿ ಭಾಗವಹಿಸುವ ನಾವೆಲ್ಲರೂ ಪುಣ್ಯವಂತರು ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸುರೇಶ ಹೀರಾ ವರದಿಗಾರರು ಸುದ್ದಿಮೂಲ ಕನ್ನಡ ದಿನಪತ್ರಿಕೆ ಸಿರವಾರ ತಾಲೂಕ. ಅಮರೇಶ ರೈತ ಮುಖಂಡರು ಚಾಗಭಾವಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಹಾಗೂ ಅನೇಕರುಗಳು ಉಪಸ್ಥಿತರಿದ್ದರು

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಲೆಕ್ಟ್ರೋಪ್ಲೇಟರ್

ಎಲೆಕ್ಟ್ರೋಪ್ಲೇಟರ್ (Electroplater) ಟ್ರೇಡ್‌ನ ಎರಡು ವರ್ಷಗಳ ತರಬೇತಿ ಅವಧಿಯಲ್ಲಿ, ಅಭ್ಯರ್ಥಿಗೆ ಉದ್ಯೋಗದ ಪಾತ್ರಕ್ಕೆ ಸಂಬಂಧಿಸಿದ ವೃತ್ತಿಪರ ಕೌಶಲ್ಯ (Professional Skill), ವೃತ್ತಿಪರ ಜ್ಞಾನ (Professional Knowledge) ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳು (Employability Skills) ಕುರಿತು ಸಮಗ್ರ ತರಬೇತಿ ನೀಡಲಾಗುತ್ತದೆ. ಇದರ ಜೊತೆಗೆ, ಅಭ್ಯರ್ಥಿಯ ಆತ್ಮವಿಶ್ವಾಸ, ಕಾರ್ಯನೈಪುಣ್ಯ ಮತ್ತು ಸಮಸ್ಯೆ ಪರಿಹಾರ ಸಾಮಥ–ರ್‍ಯವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಯೋಜನಾ ಕಾರ್ಯಗಳು (Project Work) ಹಾಗೂ ಪಠ್ಯೇತರ ಚಟುವಟಿ–ಕೆಗಳು (Extra-Curricular Activities) ಕೈಗೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತದೆ. ವಿದ್ಯಾರ್ಹತೆ 10 ನೇ ತರಗತಿ ಉತ್ತೀರ್ಣ ವೃತ್ತಿಪರ ಕೌಶಲ್ಯ ವಿಷಯದ ಅಡಿಯಲ್ಲಿ ಒಳಗೊಂಡಿರುವ ಪ್ರಮುಖ ಅಂಶಗಳು ಕೆಳಗಿನಂತಿವೆ:
ಎಲೆಕ್ಟ್ರೋಪ್ಲೇಟಿಂಗ್‌ನ ಮೂಲಭೂತ ತತ್ವಗಳು ಮತ್ತು ವಿಧಾನಗಳು
ಲೋಹಗಳ ಮೇಲ್ಮೈ ಸಿದ್ಧತೆ ಮತ್ತು ಸ್ವಚ್ಛಗೊಳಿಸುವಿಕೆ
ವಿವಿಧ ಲೋಹಗಳ ಮೇಲೆ ಲೇಪನ (Plating) ತಂತ್ರಗಳು
ರಾಸಾಯನಿಕ ದ್ರಾವಣಗಳ ತಯಾರಿ ಮತ್ತು ಬಳಕೆ
ಪ್ಲೇಟಿಂಗ್ ಉಪಕರಣಗಳು ಹಾಗೂ ಯಂತ್ರಗಳ ನಿರ್ವಹಣೆ
ಗುಣಮಟ್ಟ ಪರಿಶೀಲನೆ ಮತ್ತು ದೋಷ ಪತ್ತೆ
ಸುರಕ್ಷತಾ ಕ್ರಮಗಳು ಮತ್ತು ಕೈಗಾರಿಕಾ ನಿಯಮಗಳು
ತ್ಯಾಜ್ಯ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ
ಈ ತರಬೇತಿ ಮೂಲಕ ಅಭ್ಯರ್ಥಿಗಳು ಎಲೆಕ್ಟ್ರೋಪ್ಲೇಟಿಂಗ್ ಕ್ಷೇತ್ರದಲ್ಲಿ ತಾಂತ್ರಿಕ ಜ್ಞಾನ ಪಡೆದು ಕೈಗಾ–ರಿಕೆಗಳಲ್ಲಿ ಉದ್ಯೋಗ ಪಡೆಯಲು ಸಿದ್ಧರಾಗುತ್ತಾರೆ.

## ಅಪ್ರಾಪ್ತ ಬಾಲಕಿಯರ ಮೇಲಿನ ಅತ್ಯಾಚಾರಕ್ಕೆ ಉಗ್ರ ಶಿಕ್ಷೆ ವಿಧಿಸಲಿ – ವೈ ನರೇಂದ್ರನಾಥ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಪಿಡಬ್ಲ್ಯೂಡಿ ಕ್ಯಾಂಪ್‌ನಲ್ಲಿ 8 ಮತ್ತು 9 ವರ್ಷದ ಅಕ್ಕ?ತಂಗಿಯರ ಮೇಲೆ ನಡೆದ ಅತ್ಯಾಚಾರ ಪ್ರಕರಣವನ್ನು ಖಾಸಗಿ ಶಾಲಾ?ಕಾಲೇಜುಗಳ ಒಕ್ಕೂಟ ತೀವ್ರವಾಗಿ ಖಂಡಿಸಿದೆ. ಈ ಘಟನೆ ಇಡೀ ಸಮಾಜವೇ ತಲೆ ತಗ್ಗಿಸುವಂತಹ ಅಮಾನವೀಯ ಕೃತ್ಯವಾಗಿದ್ದು, ಆರೋಪಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒಕ್ಕೂಟದ ಅಧ್ಯಕ್ಷ ವಾಯ್. ನರೇಂದ್ರನಾಥ ಆಗ್ರಹಿಸಿದರು.**




ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, “ಬಡ ಮತ್ತು ದುಡಿಯುವ ಕುಟುಂಬಗಳು ತಮ್ಮ ಮಕ್ಕಳ ಭವಿಷ್ಯ ಉತ್ತಮವಾಗಲೆಂದು ಶಾಲೆಗೆ ಕಳುಹಿಸಿ ದಿನವಿಡೀ ದುಡಿಯಲು ಹೋಗುತ್ತಾರೆ. ಆದರೆ ಇಂತಹ ಘಟನೆಗಳು ಪೋಷಕರಲ್ಲಿ ಭಯ ಮತ್ತು ಆತಂಕವನ್ನು ಹೆಚ್ಚಿಸುತ್ತಿವೆ. ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವುದು ಸರ್ಕಾರ ಮತ್ತು ಸಮಾಜದ ಜವಾಬ್ದಾರಿಯಾಗಿದೆ” ಎಂದು ಹೇಳಿದರು.

ಅವರು ಮುಂದುವರಿದು, ಅಪ್ರಾಪ್ತ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಯಲು ಕಾನೂನು ಕ್ರಮಗಳ ಜೊತೆಗೆ ಸಾಮಾಜಿಕ ಜಾಗೃತಿ ಕೂಡ ಅಗತ್ಯವಾಗಿದೆ ಎಂದು ತಿಳಿಸಿದರು. ಶಾಲೆಗಳು, ಪೋಷಕರು ಹಾಗೂ ಸಮಾಜದ ಎಲ್ಲ ವರ್ಗಗಳು ಮಕ್ಕಳ ಸುರಕ್ಷತೆಯ ವಿಷಯದಲ್ಲಿ ಹೆಚ್ಚಿನ ಎಚ್ಚ–ರಿಕೆ ವಹಿಸಬೇಕು ಎಂದು ಕರೆ ನೀಡಿದರು.

ಇಂತಹ ಅಮಾನವೀಯ ಕೃತ್ಯ ಎಸಗಿದ ವ್ಯಕ್ತಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಠಿಣ ಸಂದೇಶ ರವಾನಿಸಬೇಕು ಎಂದು ಒತ್ತಾಯಿಸಿದರು. “ಈ ದುರ್ಘಟನೆಯ ಬಗ್ಗೆ ಸಮಾಜದ ಸಂಘಟನೆಗಳು ಮೌನ ವಹಿಸಿದರೆ ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ. ಪ್ರತಿಯೊಬ್ಬ ನಾಗ–ರಿಕರೂ ಧ್ವನಿ ಎತ್ತಿ ಇಂತಹ ಹೀನ ಕೃತ್ಯಗಳನ್ನು ಖಂಡಿಸಬೇಕು. ಮಕ್ಕಳ ರಕ್ಷಣೆ ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ” ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಂ. ದೊಡ್ಡ ಬಸವರಾಜ, ವಿರೇಶ ಅಗ್ನಿ, ಪ್ರಭಾಕರ ಕುಲಕರ್ಣಿ, ರಮಾದೇವಿ ಶಂಬೋಜಿ, ಸರಸ್ವತಿ ಪಾಟೀಲ್ ಹಾಗೂ ತನ್ವಿರ್ ಉಪಸ್ಥಿತರಿದ್ದರು.

## ದೇವದುರ್ಗ ಪಟ್ಟಣಕ್ಕೆ ಜಿಲ್ಲಾಧಿಕಾರಿ ಪೂವಿತಾ ಎಸ್. ದಿಢೀರ್ ಭೇಟಿ; ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 19 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯ ಜಿಲ್ಲಾಧಿಕಾ–ರಿಗಳಾದ ಪೂವಿತಾ ಎಸ್. ಅವರು ಗುರುವಾರ ದಂದು ಜಿಲ್ಲೆಯ ದೇವದುರ್ಗದ ತಹಶೀಲ್ದಾರ್ ಕಚೇರಿ ಸೇರಿದಂತೆ ವಿವಿಧ ಕಡೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ಮಾಡಿದರು.**










ಮೊದಲು ದೇವದುರ್ಗದ ತಹಶೀಲ್ದಾರ್ ಕಚೇರಿಗೆ ಭೇಟಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಇಲಾಖೆ, ಕಂದಾಯ ವಿವಿಧ ಶಾಖೆಗೆ ಭೇಟಿ ದಾಖಲಾತಿಗಳನ್ನು ಪರಿಶೀಲಿಸಿದರು. ನಂತರ ತಹಶೀಲ್ದಾರರ ಕಚೇರಿಯ ಸಭಾಂಗಣದಲ್ಲಿ ತಾಲೂಕು ಮಟ್ಟದ ಅಧಿಕಾ–ರಿಗಳೊಂದಿಗೆ ತಾಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ, ದೇವದುರ್ಗ ತಾಲೂಕು ಸಮಗ್ರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕ್ರಮಗಳು, ಜನರಿಗೆ ಶುದ್ಧ ಕುಡಿಯುವ ನೀರು ಒದಗಿಸುವ ಕುರಿತು ಹಾಗೂ ದೇವದುರ್ಗ ತಾಲೂಕಿನ ಮುಂದಿನ ಅಭಿವೃದ್ಧಿಗಾಗಿ ಬೇಕಾಗುವ ಅನುದಾನ ಬಗ್ಗೆ ವಿವಿಧ ಇಲಾಖೆಯ ಅಧಿಕಾರಿಗಳಿಂದ ಜಿಲ್ಲಾಧಿಕಾರಿಗಳು ಮಾಹಿತಿ ಪಡೆದರು.

ಈ ವೇಳೆ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಮಾತನಾಡಿ, ಜನ–ರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಸರ್ಕಾರದ ವಿವಿಧ ಯೋಜನೆಗಳಿಗೆ ಸಾರ್ವಜನಿಕರಿಂದ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ವಿಲೇವಾರಿ ಮಾಡಿ, ಅವರಿಗೆ ಸೌಲಭ್ಯವನ್ನು ದೊರಕಿಸಬೇಕು. ಮುಂದಿನ ದಿನಗಳಲ್ಲಿ ದೇವದುರ್ಗ ಪಟ್ಟಣ ಸೇರಿದಂತೆ ತಾಲೂಕಿನ ಗ್ರಾಮೀಣ ಭಾಗದಲ್ಲಿ ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಮುಂಜಾಗ್ರತೆ ವಹಿಸಬೇಕು. ಮಳೆ ನೀರು ಸರಾಗವಾಗಿ ಹ–ರಿಯುವಂತಾಗಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಲುವೆ, ಚರಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯ ಆಗಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರಮಾಣಿಕ ಸೇವೆ ಸಲ್ಲಿಸಬೇಕು. ಯಾವುದೇ ದೂರುಗಳು ಬರದಂತೆ ಕರ್ತವ್ಯ ನಿರ್ವಹಿಸಬೇಕು. ಪಿಂಚಣಿ ಸೌಲಭ್ಯವನ್ನು ಅರ್ಹ ಫಲಾನುಭವಿಗಳಿಗೆ ಮುಟ್ಟಿಸಲು ಸೂಕ್ತ ಕ್ರಮವಹಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ನಂತರ ಸಿಬ್ಬಂದಿಗಳು ಕಾರ್ಯನಿರ್ವಹಿಸುವ ಕೊಠಡಿಗಳಿಗೆ ತೆರಳಿ ಒಂದೊಂದು ಸಮಸ್ಯೆಗಳು ಆಲಿಸಿದರು. ಶಾಲಾ–ಕಾಲೇಜುಗಳು ಆರಂಭವಾಗಿದ್ದು, ಜಾತಿ ಪ್ರಮಾಣ ಪತ್ರ ಸೇರಿದಂತೆ ಇತರೆ ಪ್ರಮಾಣ ಪತ್ರಗಳು ಸಕಾಲಕ್ಕೆ ವಿದ್ಯಾರ್ಥಿಗಳಿಗೆ ಮುಟ್ಟಿಸುವ ಕೆಲಸ ಮಾಡಬೇಕು. ಯಾವುದೇ ಕಾರಣ–ಕ್ಕೆ ವಿದ್ಯಾರ್ಥಿಗಳು ಶಾಲೆ, ಕಾಲೇಜ್ ಬಿಟ್ಟು ಕಚೇರಿಗೆ ಅಲೆಯದಂತೆ ನೋಡಿಕೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾ–ರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ವಸತಿ ನಿಯಲಕ್ಕೆ ಭೇಟಿ: ದೇವದುರ್ಗ ಪಟ್ಟಣದ ಹೊರವಲಯದ ರಾಯಚೂರು ರಸ್ತೆಯ ಹತ್ತಿರುವ ವಿವಿಧ ವಸತಿ ನಿಲಯಗಳಿಗೆ ಜಿಲ್ಲಾಧಿಕಾರಿ ಅವರು ಭೇಟಿ ನೀಡಿ, ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿವಿಧ ಸೌಲಭ್ಯಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ನಿಲಯದ ಕೊಠಡಿಗಳು, ಗ್ರಂಥಾಲಯ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಅಡುಗೆ ಮನೆ, ದಿನಸಿ ಸಾಮಗ್ರಿಗಳ ಉಗ್ರಾಣ ಇತರೆ ಸೌಲಭ್ಯಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ಅಗತ್ಯ ಮಾಹಿತಿಯನ್ನು ಪಡೆದು, ವಿದ್ಯಾರ್ಥಿಗಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಸರಿಯಾದ ರೀತಿಯಲ್ಲಿ ಕೊಡಬೇಕೆಂದರು, ನಂತರ ವಿದ್ಯಾರ್ಥಿಗಳೊಂದಿಗೆ ಸಮಾಲೋಚನೆ ನಡೆಸಿದ ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳ ಕನಸುಗಳು, ಗುರಿಗಳು ಹಾಗೂ ಭವಿಷ್ಯದ ಯೋಜನೆಗಳ ಕುರಿತು ಸಂವಾದ ನಡೆಸಿ ತಮ್ಮ ಸ್ಫೂರ್ತಿದಾಯಕ ಮಾತುಗಳ ಮೂಲಕ ವಿದ್ಯಾರ್ಥಿಗಳನ್ನು ಸರ್ವತೋಮುಖ ಬೆಳವಣಿಗೆ ಸಾಧಿಸಲು ಹುರಿದುಂಬಿಸಿದರು. ಇದಕ್ಕೂ ಮುಂಚೆ ದೇವದುರ್ಗ ಪಟ್ಟಣದ ಅಂಗನವಾಡಿ ಕೇಂದ್ರಕ್ಕೆ ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಇದೇ ಸಂದರ್ಭದಲ್ಲಿ ದೇವದುರ್ಗ ತಹಶೀಲ್ದಾರ್ ನಾಗಮ್ಮ ಕಟ್ಟಿಮನಿ, ಅರಕೇರಾ ತಹಶೀಲ್ದಾರ್ ಅಮರೇಶ, ತಾಲೂಕು ಆರೋಗ್ಯಾಧಿಕಾರಿ ಡಾ.ಬನದೇಶ್ವರ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

## ಅಮರೇಶ್ವರ ರುದ್ರಯಾಗ ಮಂಟಪದ ಭೂಮಿ ಪೂಜೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಅಮರಗುಂಡ ತೋಪಿನಕಟ್ಟೆ ಸಂಸ್ಥಾನ ಬೃಹನ್ಮಠ, ದೇವರ ಭೂಪುರ್, ಅಮರೇಶ್ವರ ಗುರು ಲಿಂ.ಗಜದಂಡ ಶಿವಾಚಾರ್ಯರವರ 21ನೇ ವರ್ಷದ ಪುಣ್ಯಸ್ಮರಣೋತ್ಸವ ಹಾಗೂ ಷ.ಬ್ರ. ಅಮರೇಶ್ವರ ಗುರು ಅಭಿನವ ಗಜದಂಡ ಶಿವಾಚಾರ್ಯರವರ 21ನೇ ವರ್ಷದ ಗುರು ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ನಿರ್ಮಿಸಲಾಗುತ್ತಿರುವ ಅಮರೇಶ್ವರ ಮಂಟಪ ಹಾಗೂ ಗುರು ಗಜದಂಡೇಶ್ವರರ ವೇದಿಕೆಯ ಭೂಮಿ ಪೂಜೆ ನೆರವೇರಿತು.**



ಅದೇ ರೀತಿ ಲೋಕಕಲ್ಯಾಣ ಹಾಗೂ ವಿಶ್ವಶಾಂತಿಯ ಸಂಕಲ್ಪದೊಂದಿಗೆ ಶ್ರೀಮಠದಲ್ಲಿ ನಡೆಯಲಿರುವ ರುದ್ರಯಾಗಕ್ಕಾಗಿ ನಿರ್ಮಿಸಲಾಗುವ ಯಾಗಮಂಟಪದ ಭೂಮಿ ಪೂಜೆಯೂ ಭಕ್ತಿಭಾವದಿಂದ ನೆರವೇರಿತು. ಈ ಧಾರ್ಮಿಕ ಕಾರ್ಯಕ್ರಮವು ಷ.ಬ್ರ. ಅಮರೇಶ್ವರ ಗುರು ಅಭಿನವ ಗಜದಂಡ ಶಿವಾಚಾರ್ಯರವರ ದಿವ್ಯ ಸಾನಿಧ್ಯದಲ್ಲಿ ಜರುಗಿತು. ಪೂಜ್ಯ ವೇದಮೂರ್ತಿ ಗಂಗಾಧರಯ್ಯ ಶಾಸ್ತ್ರಿಯವರು ಶಾಸ್ತ್ರೋಕ್ತ ವಿಧಿ–ವಿಧಾನಗ ಳೊಂದಿಗೆ ಭೂಮಿ ಪೂಜೆಯನ್ನು ನೆರವೇ–ರಿಸಿದರು. ಈ ಸಂದರ್ಭದಲ್ಲಿ ಬಸಯ್ಯಸ್ವಾಮಿ ಗುಂತಗುಳ, ಅಮರೇಶ ಸ್ವಾಮಿ, ಅಮರೇಗೌಡ ಪೊಲೀಸ್ ಪಾಟೀಲ್, ಯಂಕನಗೌಡ ಪೊಲೀಸ್ ಪಾಟೀಲ್, ಮಂಜುನಾಥ ಹೂಗಾರ್, ಶ್ರೀಧರ್ ಕೆಣಿಗೆ ಸೇರಿದಂತೆ ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಯೋಗ ಜಾಗೃತಿ ಜಾಥಾಕ್ಕೆ ಅಪರ ಜಿಲ್ಲಾಧಿಕಾರಿಗಳಿಂದ ಚಾಲನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು ಜೂನ್ 19 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಜೂನ್ 21 ರಂದು ನಡೆಯುವ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಗುರುವಾರ ದಂದು ಯೋಗ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಪ್ರಭಾರ ಅಪರ ಜಿಲ್ಲಾಧಿಕಾರಿಗಳಾದ ಹಂಪಣ್ಣ ಸಜ್ಜನ್ ಅವರು ಚಾಲನೆ ನೀಡಿದರು.**

ಈ ವೇಳೆ ಅವರು ಮಾತನಾಡಿ, ಆರೋಗ್ಯಕ್ಕಾಗಿ ಯೋಗವನ್ನು ಪ್ರತಿ ದಿನ ಮಾಡುತ್ತಾಹೊದರೆ ಮಾನಸಿಕ ನೆಮ್ಮದಿ ಮತ್ತು ದೈಹಿಕ ಶಕ್ತಿ ಹೆಚ್ಚಿಸುತ್ತದೆ. ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ.ಹೀಗಾಗಿ ಜಿಲ್ಲೆಯಲ್ಲಿ ಭಾನುವಾರ ದಂದು ಅಂತರಾಷ್ಟ್ರೀಯ ದಿನಾಚರಣೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕರೆ ನೀಡಿದರು.




ಯೋಗ ಜಾಗೃತಿ ಜಾಥಾವು ರಾಯಚೂರು ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಿಂದ ಸರಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ, ಏಕ್ ಮೀನಾರ್ ವರಿಗೆ ನಡೆಸಲಾಯಿತು. ಈ ಜಾಥಾದಲ್ಲಿ ಪೂರ್ಣಿಮಾ ಆಯುರ್ವೇದ ಕಾಲೇಜಿನ 200 ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಸಂಘ, ಸಂಸ್ಥೆಗಳ ಸುಮಾರು 100 ಜನರು ಭಾಗವಹಿಸಿದ್ದರು ಎಂದು ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಶಂಕರಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಡಗೌಡರಿಗೆ ಸಚಿವ ಸ್ಥಾನ: ಮುದ್ದೇಬಿಹಾಳ ಬಂದ್‌ಗೆ ವ್ಯಾಪಕ ಬೆಂಬಲ

❑ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಹಿರಿಯ ಶಾಸಕ ಸಿ.ಎಸ್. ನಾಡಗೌಡ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಕರೆ ನೀಡಿದ್ದ ಮುದ್ದೇಬಿಹಾಳ ಪಟ್ಟಣ ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.**

ಪಟ್ಟಣದಾದ್ಯಂತ ಅಂಗಡಿ–ಮುಂಗಟ್ಟುಗಳು ಸ್ವಯಂಪ್ರೇರಿತವಾಗಿ ಮುಚ್ಚಲ್ಪಟ್ಟಿದ್ದು, ವ್ಯಾಪಾರ–ವಹಿವಾಟು ಬಹುತೇಕ ಸ್ಥಗಿತಗೊಂಡಿತ್ತು. ಬಸವೇಶ್ವರ ವೃತ್ತ, ಅಂಬೇಡ್ಕರ್ ವೃತ್ತ, ಇಂದಿರಾ ವೃತ್ತ, ಬಸ್ ನಿಲ್ದಾಣ ಹಾಗೂ ಪ್ರಮುಖ ಮಾರುಕಟ್ಟೆ ಪ್ರದೇಶಗಳಲ್ಲಿ ಜನಸಂಚಾರ ವಿರಳವಾಗಿತ್ತು. ಖಾಸಗಿ ವಾಹನಗಳ ಸಂಚಾರ ಕಡಿಮೆಯಾಗಿದ್ದರಿಂದ ರಸ್ತೆಗಳು ನಿರ್ಜನವಾಗಿದ್ದವು. ವಿವಿಧ ಗ್ರಾಮಗಳಿಂದ ಸರ್ಕಾರಿ ಬಸ್‌ಗಳನ್ನು ಅವಲಂಬಿಸಿ ಬಂದಿದ್ದ ಪ್ರಯಾಣಿಕರು ಸಂಚಾರದಲ್ಲಿ ಉಂಟಾದ ವ್ಯತ್ಯಯದಿಂದ ಸಂಕಷ್ಟ ಅನುಭವಿಸಿದರು. ಕೆಲವರು ಕಾಲ್ನಡಿಗೆಯಲ್ಲೇ ತಮ್ಮ ಗಮ್ಯಸ್ಥಾನಗಳತ್ತ ತೆರಳಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು.

ಬಂದ್ ಅಂಗವಾಗಿ ಪಟ್ಟಣದ ಬನಶಂಕರಿ ದೇವಸ್ಥಾನದ ಆವರಣದಿಂದ ಕಾಂಗ್ರೆಸ್



ಮುಖಂಡರು, ಕಾರ್ಯಕರ್ತರು ಹಾಗೂ ನಾಡಗೌಡ ಅಭಿಮಾನಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು. ಪ್ರಮುಖ ರಸ್ತೆಗಳಲ್ಲಿ ಸಾಗಿದ ಪ್ರತಿಭಟನಾಕಾರರು ‘ಸಿ.ಎಸ್. ನಾಡಗೌಡರಿಗೆ ಸಚಿವ ಸ್ಥಾನ ನೀಡಬೇಕು’, ‘ಮುದ್ದೇಬಿಹಾಳ ಕ್ಷೇತ್ರಕ್ಕೆ ನ್ಯಾಯ ದೊರಕಬೇಕು’ ಎಂಬ ಘೋಷಣೆಗಳನ್ನು ಕೂಗುತ್ತಾ ಬಸವೇಶ್ವರ ವೃತ್ತದವರೆಗೆ ಮೆರವಣಿಗೆ ನಡೆಸಿದರು.

ಬಸವೇಶ್ವರ ವೃತ್ತದಲ್ಲಿ ನಡೆದ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಪ್ಪಣ್ಣ ದೊಡಮನಿ, ನಾಡಗೌಡ ಅವರು ಹಲವು ದಶಕಗಳಿಂದ ಪಕ್ಷ ಸಂಘಟನೆ ಹಾಗೂ ಕ್ಷೇತ್ರದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅನುಭವಿ ಹಾಗೂ ಹಿರಿಯ ನಾಯಕರಾದ ಅವರಿಗೆ ಸಚಿವ ಸ್ಥಾನ ನೀಡದೆ ನಿರ್ಲಕ್ಷ್ಯ ಮಾಡುತ್ತಿರುವುದು ಕ್ಷೇತ್ರದ ಜನರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದೆ ಎಂದು ಹೇಳಿದರು. ಕಾಂಗ್ರೆಸ್ ಹಿರಿಯ ಮುಖಂಡ ಹಾಗೂ ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ವೈ. ಎಚ್. ವಿಜಯಕರ ಮಾತನಾಡಿ, ಕ್ಷೇತ್ರದಲ್ಲಿ ನೀರಾವರಿ, ಶಿಕ್ಷಣ, ಆರೋಗ್ಯ ಹಾಗೂ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿಗೆ ಇನ್ನಷ್ಟು ಗಮನ ಅಗತ್ಯವಿದೆ. ಈ ಸಮಸ್ಯೆಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಮಂಡಿಸುವ ಸಾಮರ್ಥ್ಯ ನಾಡಗೌಡ ಅವರಿಗಿದ್ದು, ಅವರಿಗೆ ಸಚಿವ ಸ್ಥಾನ ನೀಡುವ ಮೂಲಕ ಕ್ಷೇತ್ರದ ಜನರ ಆಶಯವನ್ನು ಈಡೇರಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ ಮಾತನಾಡಿ, ಕ್ಷೇತ್ರದ ಜನರು ಹಲವು ವರ್ಷಗಳಿಂದ ನಾಡಗೌಡ ಅವರ ನಾಯಕತ್ವವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡುವುದು ನ್ಯಾಯಸಮ್ಮತ ನಿರ್ಧಾರವಾಗಿದ್ದು, ಸರ್ಕಾರ ಹಾಗೂ ಪಕ್ಷದ ಹೈಕಮಾಂಡ್ ಕೂಡಲೇ ಕ್ಷೇತ್ರದ ಜನರ ಭಾವನೆಗಳಿಗೆ ಸ್ಪಂದಿಸಬೇಕು. ಇಲ್ಲವಾದಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಹಾಗೂ ನಾಡಗೌಡ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮಹಿಳಾ ಕಾರ್ಯಕರ್ತೆಯರೂ ಪ್ರತಿಭಟನೆಯಲ್ಲಿ ಪಾಲ್ಗೊಂಡು ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.

ಬಿಗಿ ಪೊಲೀಸ್ ಬಂದೋಬಸ್ತ್ ಬಂದ್ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಭದ್ರತಾ ಕ್ರಮ ಕೈಗೊಂಡಿತ್ತು. ಸಿಪಿಐ ಮಹಮ್ಮದ ಪಸಿಯುದ್ದೀನ್ ಹಾಗೂ ಪಿಎಸ್‌ಐ ಸಂಜಯ ತಿಪ್ಪರಡ್ಡಿ ಅವರ ನೇತೃತ್ವದಲ್ಲಿ ಕೂಡಗಿ, ನಿಡಗುಂದಿ, ಬಸವನ ಬಾಗೇವಾಡಿ ಹಾಗೂ ತಾಳಿಕೋಟಿ ಠಾಣೆಗಳಿಂದ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ವಿಜಯಪುರ ಜಿಲ್ಲೆಯಿಂದ ಶಸ್ತ್ರಸಜ್ಜಿತ ಮೀಸಲು ಪಡೆಯನ್ನೂ ಕರೆಯಲಾಗಿತ್ತು. ಬಸವನ ಬಾಗೇವಾಡಿ ಡಿವೈಎಸ್‌ಪಿ ಚಂದ್ರಕಾಂತ ನಂದರಡ್ಡಿ ಅವರ ಮಾರ್ಗದರ್ಶನದಲ್ಲಿ 120ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಪ್ರಮುಖ ವೃತ್ತಗಳು, ಬಸ್ ನಿಲ್ದಾಣ ಹಾಗೂ ಮಾರುಕಟ್ಟೆ ಪ್ರದೇಶಗಳಲ್ಲಿ ನಿಗಾ ವಹಿಸಿ ಶಾಂತಿ–ಸುವ್ಯವಸ್ಥೆ ಕಾಪಾಡಿದರು. ಈ ಸಂದರ್ಭದಲ್ಲಿ ಬಿ.ಕೆ. ಬಿರಾದಾರ, ಸಂಗನಗೌಡ ಬಿರಾದಾರ (ಜಿಟಿಸಿ), ಕಾಮರಾಜ ಬಿರಾದಾರ, ಶಿವಪ್ಪಗೌಡ ತಾತರಡ್ಡಿ, ಮಲ್ಲಿಕಾರ್ಜುನ ಅಪರಾಧಿ, ಸಿ.ಎಲ್. ಬಿರಾದಾರ, ಎಸ್.ಎಸ್. ಮಾಲಗತ್ತಿ, ಶ್ರೀಶೈಲ ಮರೋಳ, ರಾಜು ಕೊಂಗಿ, ಬಸವರಾಜ ಇಸ್ಲಾಂಪೂರ, ಅಶೋಕ ಚೆಟ್ಟೇರ, ಶಿವಗೌಡ ತಾಳಿಕೋಟಿ, ಪ್ರದೀಪ ನಾಡಗೌಡ, ಸದು ಮಠ, ಸಿ.ಜಿ. ವಿಜಯಕರ, ಸಂಗನಗೌಡ ಪಾಟೀಲ, ಕೆ. ಎಸ್. ಪಾಟೀಲ, ಬಾಪುಗೌಡ ಪೀರಾಪೂರ, ಅಮರೇಶ ಗೂಳಿ ಸೇರಿದಂತೆ ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಒಟ್ಟಾರೆ,

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101